# ಜೀವನದುದ್ದೇಶ

## (ಒಂದು ಆಧ್ಯಾತ್ಮಿಕ ಅಧ್ಯಯನ)



# ಜೀವನದುದ್ದೇಶ

## (ಒಂದು ಆಧ್ಯಾತ್ಮಿಕ ಅಧ್ಯಯನ)

ಮೌಲಾನಾ ವಹೀದುದ್ದೀನ್ ಖಾನ್

**First published 2024**
This book is copyright free

**URDU VERSION**: Maqsad-e-hayat
By Maulana Wahiduddin Khan
**KANNADA VERSION**: Jeewanaduddesha
**TRANSLATED BY:**
Ibraheem Sayeed Omari

**GOODWORD BOOKS**
A-21, sector 4, noida-201301, delhi nCr, india
Tel. +91 120 4131448, Mob. +91 8588822672
email: info@goodwordbooks.com
www.goodwordbooks.com

**CPS INTERNATIONAL**
Centre for Peace and spirituality international
1, nizamuddin West Market, new delhi-110 013, india
Mob. +91-9999944119
e-mail: info@cpsglobal.org
www.cpsglobal.org

**CPS KARNATAKA**
Kasimsab Ameenasab Hallur,
M/S Hallur petroleum's, Nalatwad Road,
Mehaboob Nagar, At, Post, Tq: Muddebihal,
District: Vijayapura. State: Karnataka,
India, Pin -586212,
Mob, +91-9880155608, +91- 9945806156
e-mail: shamuhallur2@gmail.com
Printed in India.

# ಮಾನವನ ಅಂತಿಮ ನೆಲೆ

ವ್ಯಕ್ತಿಯೋರ್ವ ತನ್ನ ಪೂರ್ತಿ ಜೀವಿತಾವಧಿಯಲ್ಲಿ ಒಮ್ಮೆಯೂ ಭೂಗ್ರಹವನ್ನು ನೋಡಿಲ್ಲವೆಂದಿಟ್ಟುಕೊಳ್ಳಿ. ಅಂತಹ ವ್ಯಕ್ತಿಯು ಅತ್ಯಂತ ವೇಗಭರಿತ ಅಂತರಿಕ್ಷ ನೌಕೆಯ ಮೂಲಕ ಪೂರ್ತಿ ಸೌರಮಂಡಲವನ್ನು ಸುತ್ತಿ ಬಂದು, ಮೊತ್ತ ಮೊದಲ ಬಾರಿಗೆ ಭೂಮಿಗೆ ಬಂದಿಳಿದರೆ ಅವನು ಭೂಮಿಯ ರಚನೆಯ ಕುರಿತು ಅತ್ಯಂತ ದಿಗ್ಭ್ರಮೆಗೊಳಗಾಗುತ್ತಾನೆ. ಏಕೆಂದರೆ, ಇಷ್ಟೊಂದು ವಿಶಾಲಮಯವಾದ ಸೌರಮಂಡಲದಲ್ಲಿ ವಾಸಿಸಲು ಭೂಮಿಗಿಂತ ಯೋಗ್ಯವಾದ ವಿಶಿಷ್ಟ ಗ್ರಹ ಬೇರೊಂದಿಲ್ಲ. ಇಷ್ಟು ವಿಶಾಲಮಯವಾದ ಸೌರಮಂಡಲದಲ್ಲಿರುವ ಬೆಂಕಿಯುಂಡೆಗಳಂತಹ ಅಸಂಖ್ಯಾತ ನಕ್ಷತ್ರಗಳಾಗಲಿ, ಎಲ್ಲಿ ನೋಡಿದರೂ ಒಣಬಂಡೆಯನ್ನೇ ಹಾಸಿದಂತಿರುವ ಗ್ರಹಗಳಾಗಲೀ ಭೂಮಿಯಂತೆ ವಾಸಿಸಲು ಯೋಗ್ಯವಲ್ಲ. ಕೇವಲ ಭೂಮಿಯಲ್ಲಿ ಮಾತ್ರ ಮನುಷ್ಯನಂತಹ ಜೀವಿಗಳು ಬದುಕಲು ಬೇಕಾದ ಎಲ್ಲಾ ಮೂಲಭೂತ ಸೌಕರ್ಯಗಳು (Life support system), ಸವಲತ್ತುಗಳು ಮತ್ತಿನ್ನಿತರ ಎಲ್ಲಾ ವಸ್ತುಗಳನ್ನು ಇರಿಸಲಾಗಿದೆ.

ಮನುಷ್ಯನೋರ್ವ ಇದೇ ಭೂಮಿಯಲ್ಲೇ ಹುಟ್ಟಿ, ಇಲ್ಲೇ ನೆಲೆಸಿ ಕೊನೆಗೆ ಇಲ್ಲೇ ಮರಣಹೊಂದುವಾಗಲೂ ಅವನಿಗೆ ಭೂಮಿಯ ಈ ಅಸಾಧಾರಣೆತೆಯ, ಈ ವಿಶಿಷ್ಟತೆಯ ಅನುಭವವಾಗುವುದಿಲ್ಲ. ಇದಕ್ಕೆ ಪ್ರಮುಖ ಕಾರಣವೇನೆಂದರೆ ಅವನು ತನ್ನ ಬಾಲ್ಯದಿಂದಲೇ ಪ್ರತಿನಿತ್ಯ ಭೂಮಿಯನ್ನು ನೋಡುತ್ತಲೇ ಬೆಳೆಯುವುದರಿಂದ ಭೂಮಿಯಲ್ಲಿರುವ ಪ್ರತಿಯೊಂದು ವಿಶಿಷ್ಟತೆಯನ್ನವನು 'ಇದೊಂದು ಸಾಮಾನ್ಯ ಸಂಗತಿ' ಅಥವಾ "'ಸಾಮಾನ್ಯ ಪ್ರಕ್ರಿಯೆ' ಎಂದೇ ಭಾವಿಸುವನು. ಹೀಗಾಗಿಯೇ ಭೂಮಿಯ ಈ ಅಸಾಧಾರಣ ಅನನ್ಯತೆಯು ಅವನ ದೃಷ್ಟಿಯಿಂದ ಮರೆಯಾಗಿಬಿಡುವುದು. ಭೂಮಿಯ ವಿಶಿಷ್ಟತೆಯ ಅದರ ಅನನ್ಯತೆಯ ನೈಜ ಅನುಭೂತಿ ವ್ಯಕ್ತಿಗೆ ಎಂದಾಗುವುದೋ, ಅಂದಿನಿಂದ ಪ್ರತಿ ಮುಂಜಾನೆಯೂ ಅವನಿಗರಿವಿಲ್ಲದಂತೆ ಅವನ ಬಾಯಿಯಿಂದ , 'ಓಹ್!, ಎಂತಹ ಸುಂದರ ಮತ್ತು ಪರಿಪೂರ್ಣತೆಯ ಬೀಡು ಈ ಭೂಮಿ' (Oh, what a beautiful earth, what a perfect world') ಎಂಬ ಆಶ್ಚರ್ಯಚಕಿತ ಉದ್ಗಾರವು ಹೊರಹೊಮ್ಮುವುದು.

ಭೂಗ್ರಹದ ಈ ವೈಶಿಷ್ಟತೆಯು ಸೃಷ್ಟಿಯ ಆದಿಯಿಂದಲೂ ಇತ್ತಾದರೂ, ಆಧುನಿಕ ಜಗತ್ತಿನ ಹೊಸ ವೈಜ್ಞಾನಿಕ ಆವಿಷ್ಕಾರಗಳು ಈ ವೈಶಿಷ್ಟ್ಯಕ್ಕೆ ಮೊದಲಿನಿಗಿಂತಲೂ ಸಾವಿರ ಪಟ್ಟು ಹೆಚ್ಚು

ಮೆರುಗನ್ನು ನೀಡಿವೆ. ಹಾಗಾಗಿಯೇ, ಆಧುನಿಕ ಜಗತ್ತಿನ ಜನರು ಭೂಗ್ರಹದ ಈ ವೈಶಿಷ್ಟ್ಯವನ್ನು ಬಹಳ ಪ್ರಬುದ್ಧತೆಯೊಂದಿಗೆ ಅರ್ಥಮಾಡಿಕೊಳ್ಳಬಲ್ಲರು. ಇದಕ್ಕಿಂತ ಮುಂಚಿನ ಜನರು ಭೂಮಿಯ ಈ ಲೈಫ್ ಸಪೋರ್ಟ್ ಸಿಸ್ಟಮ್ (Life support system) ಅನ್ನು ಅರಿಯಲು ಇಂದಿನ ಆಧುನಿಕ ಜನರಷ್ಟು ಸಮರ್ಥರಾಗಿರಲಿಲ್ಲ.

ಈ 'ಲೈಫ್ ಸಪೋರ್ಟ್ ಸಿಸ್ಟಮ್' ಎಂದರೇನು?, ವಾಸ್ತವದಲ್ಲಿ ಇಲ್ಲಿನ ಸಂಪೂರ್ಣ ಲೈಫ್ ಸಪೋರ್ಟ್ ಸಿಸ್ಟಮ್ ಎಂಬುದು ಮಾನವರ ಪಾಲಿಗೆ ಒಂದು 'ಮಹಾನ್ ಕೊಡುಗೆ' ಯಾಗಿದೆ. ಇದನ್ನು ನಾವು ಸರಿಯಾಗಿ ಅರಿತಾಗ, ಮಾನವನು ಇಲ್ಲಿ ಬದುಕಲು ಆವಶ್ಯಕವಾದ ಪ್ರತಿಯೊಂದು ಕೊಡುಗೆಯ ಹಿಂದೆ ಅದನ್ನು ನೀಡಿರುವ ಮಹಾದಾನಿಯೊಬ್ಬನಿದ್ದಾನೆ ಎಂಬ ಸತ್ಯವು ನಮ್ಮ ಮುಂದೆ ಅನಾವರಣಗೊಳ್ಳುವುದು. ವಾಸ್ತವ ಹೀಗಿರುವಾಗ, ಯಾವ ಮಹಾದಾನಿಯ ಮೂಲಕ ನಮಗೆ ಇಲ್ಲಿನ ಈ ಎಲ್ಲಾ ಮೂಲಭೂತ ಸೌಕರ್ಯಗಳು ದೊರಕುತ್ತಿರುವವೋ, ಆ ಮಹಾದಾನಿಯ ಅಸ್ತಿತ್ವವನ್ನು ಗುರುತಿಸಿ, ಅವನ ಆ ಅಸ್ತಿತ್ವವನ್ನು ಹೃದಯಾಂತರಾಳದಿಂದ ಅಂಗೀಕರಿಸಿ, ಕೃತಜ್ಞಾಪೂರ್ವಕವಾಗಿ ಅವನ ಮುಂದೆ ಶಿರಬಾಗುವುದು, ಅವನು ನಮಗೆ ನೀಡಿರುವ ಈ ಮಹಾನ್ ಕೊಡುಗೆಗಳ ಹಿಂದಿರುವ ಉದ್ದೇಶವೇನು? ಎಂಬುದನ್ನು ಅರಿಯಲು ಪ್ರಯತ್ನಿಸುವುದು, ಅವನು ನಮಗೆ ನೀಡಿರುವ ಎಲ್ಲಾ ಕೊಡುಗೆಗಳನ್ನು ಅವನಿಚ್ಛೆಯಂತೆ ಬಳಸುತ್ತಾ ಅವನ ಉದ್ದೇಶಕ್ಕನುಗುಣವಾಗಿ ನಮ್ಮ ಬದುಕನ್ನು ರೂಪಿಸಿಕೊಂಡು ಅದರಂತೆ ನಡೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿತ್ತು.

ಆದರೆ ಇದ್ಯಾವುದೂ ಆಗುತ್ತಿಲ್ಲ. ಮನುಷ್ಯನ ಈ ಭೂಮಿಯಲ್ಲಿ ತನ್ನ ಮನಸೋ ಇಚ್ಛೇ ಬದುಕುತ್ತಾ, ತನ್ನದೇ ಆದ ಒಂದು ಜೀವನಕ್ರಮವನ್ನು ರೂಪಿಸಿಕೊಳ್ಳುತ್ತಾನೆ. ತನ್ನ ಮತ್ತು ತನ್ನ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಹಗುಲಿರುಳು ಅವಿರತ ಪ್ರಯತ್ನ ಪಡುತ್ತಾನೆ. ಇದೆಲ್ಲದರ ನಡುವೆ ಅವನು ಎಂದಿಗೂ, ತನ್ನನ್ನು ಸೃಷ್ಟಿಸಿದವನಾರು?, ತನಗಿಲ್ಲಿ ಬದುಕಲು ಬೇಕಾದ ಅದ್ಭುತ ಮೂಲಭೂತ ಸೌಕರ್ಯಗಳನ್ನು, ಈ ಲೈಫ್ ಸಪೋರ್ಟಿಂಗ್ ಸಿಸ್ಟಮ್ ಅನ್ನು ಒದಗಿಸಿದವನಾರು?, ನಮಗಾಗಿ ಇಷ್ಟೆಲ್ಲಾ ಸೌಕರ್ಯಗಳನ್ನು ಒದಗಿಸಿದಾತನು ನಮ್ಮಿಂದ ಬಯಸುವುದೇನನ್ನು? ಎಂಬುದರ ಕುರಿತು ಒಂದಿನಿತೂ ಚಿಂತಿಸುವುದಿಲ್ಲ.

ವಾಸ್ತವದಲ್ಲಿ ಈ ಪ್ರಪಂಚದ ಪ್ರತಿಯೊಂದು ವಸ್ತುವಿನ ಬಳಕೆಯಲ್ಲೂ ಎರಡು ಆಯಾಮಗಳಿವೆ. ಮೊದಲನೆಯದು 'ಸದ್ಬಳಕೆ' ಯಾದರೆ ಎರಡನೆಯದು 'ದುರ್ಬಳಕೆ'. ಉದಾಹರಣೆಗೆ ಸೃಷ್ಟಿಕರ್ತನು ಈ ಭೂಮಿಯಲ್ಲಿ ಲೋಹವನ್ನು ಸೃಷ್ಟಿಸಿರುವನು. ಲೋಹದ ಬಳಕೆಯ ಮೊದಲ ಆಯಾಮವೇನೆಂದರೆ, ಅದರ ಮೂಲಕ ಯಾವುದಾದರೂ ಪ್ರಯೋಜನಕಾರಿ ಯಂತ್ರವನ್ನು ತಯಾರಿಸುವುದು. ಲೋಹದ ಮೂಲಕ ವಿಧ್ವಂಸಕ ಆಯುಧಗಳನ್ನು ತಯಾರು ಮಾಡುವುದು ಅದರ ಬಳಕೆಯ ಎರಡನೆಯ ಆಯಾಮವಾಗಿದೆ. ಮೊದಲನೆಯದು ಲೋಹದ ಸದ್ಬಳಕೆ ಯಾದರೆ ಎರಡನೆಯದು ಲೋಹದ ದುರ್ಬಳಕೆಯಾಗಿದೆ.

"ಲೈಫ್ ಸಪೋರ್ಟಿಂಗ್ ಸಿಸ್ಟಮ್' ವಿಷಯದಲ್ಲೂ ಇದೇ ನಿಯಮ ಅನ್ವಯಿಸುವುದು. ಇದನ್ನು ಕೂಡ ಎರಡು ಆಯಾಮಗಳಿಂದ ನೋಡಬಹುದು. ಮೊದಲನೆಯದು ಅದನ್ನು ನೇರದೃಷ್ಟಿಕೋನದಿಂದ (Right Angle) ನೋಡುವುದು, ಎರಡನೆಯದು ಅದನ್ನು ವಕ್ರದೃಷ್ಟಿಕೋನದಿಂದ (Wrong Angle) ನೋಡುವುದು. ನೇರದೃಷ್ಟಿಕೋನ ಹೊಂದಿರುವ ಯಾವುದೇ ವ್ಯಕ್ತಿ, 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ನ ಕುರಿತು ಸರಿಯಾದ ನಿಲುವನ್ನು ತಾಳಬಲ್ಲ. ಇದಕ್ಕೆ ತದ್ವಿರುದ್ಧವಾಗಿ ವಕ್ರದೃಷ್ಟಿಕೋನ ಹೊಂದಿರುವ ವ್ಯಕ್ತಿಯೋರ್ವ, 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ನ ಕುರಿತು ಎಲ್ಲ ರೀತಿಯಲ್ಲೂ ತಪ್ಪಾದ ನಿಲುವನ್ನೇ ಹೊಂದುವನು.

"ಲೈಫ್ ಸಪೋರ್ಟಿಂಗ್ ಸಿಸ್ಟಮ್" ನ ಕುರಿತು ಸರಿಯಾದ ದೃಷ್ಟಿಕೋನ ಹಾಗೂ ವಕ್ರದೃಷ್ಟಿಕೋನವನ್ನು ನಿರ್ಧರಿಸುವ ಬಗೆ ಹೇಗೆ?, ಇದಕ್ಕಿರುವ ಒಂದೇ ಒಂದು ಪರಿಹಾರವೇನೆಂದರೆ, ಸೃಷ್ಟಿನಿಯಮದ ಹಿಂದಿರುವ (Creation Plan) ಸೃಷ್ಟಿಕರ್ತನ ಉದ್ದೇಶವನ್ನು ಅರಿಯುವುದು. ದೇವನ ಸೃಷ್ಟಿನಿಯಮದ ಹಿಂದಿರುವ ಉದ್ದೇಶವನ್ನು ಅರಿಯುವುದರ ಆಧಾರದ ಮೂಲಕವಷ್ಟೇ ನಾವು 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ನ ಕುರಿತ ನಮ್ಮ ನಿಲುವು ಎಷ್ಟರ ಮಟ್ಟಿಗೆ ಸರಿ ಅಥವಾ ತಪ್ಪಾಗಿತ್ತು ಎಂಬುದನ್ನು ಅರಿಯಲು ಅಥವಾ ಅಳೆಯಲು ಸಾಧ್ಯ.

ಸೃಷ್ಟಿಕರ್ತನು ತಾನು, ಮಾನವನನ್ನು (ಪರಲೋಕದಲ್ಲಿ) ಶಾಶ್ವತವಾಗಿ ಜೀವಿಸುವ ಸೃಷ್ಟಿಯನ್ನಾಗಿ ಸೃಷ್ಟಿಸಿರುವೆನು ಎಂಬ ಸಂದೇಶವನ್ನು ತನ್ನ ಸಂದೇಶವಾಹಕರು ಅಥವಾ ಪ್ರವಾದಿಗಳ ಮೂಲಕ ನಮಗೆ ತಿಳಿಸಿಕೊಟ್ಟಿರುವನು. ಸೃಷ್ಟಿಕರ್ತನು ಅವನ ಆಯಸ್ಸನ್ನು ಎರಡು ಭಾಗವಾಗಿ

ವಿಂಗಡಿಸಿರುವನು. ಮೊದಲನೆಯದು (ಇಹಲೋಕದಲ್ಲಿ) "ಮರಣ ಪೂರ್ವ ಅವಧಿ" (Pre-death period). ಆ ಬಳಿಕದ್ದು (Post-death period).

ಮರಣಕ್ಕಿಂತ ಮೊದಲಿನ ಅವಧಿಯು (ಲೌಕಿಕಜೀವನಾವಧಿ) ಬಹಳ ಸಣ್ಣದು. ಆ ಬಳಿಕದ 'ಮರಣಾನಂತರದ ಅವಧಿ' ಯು (ಪಾರಲೌಕಿಕಾವಧಿ) ಎಂದಿಗೂ ಕೊನೆಗೊಳ್ಳದಂತಹದ್ದು. ಮರಣ ಪೂರ್ವಾವಧಿಯು (ಇಹಲೋಕ ಜೀವನ) ಮನುಷ್ಯನ ಪಾಲಿಗೆ ಪರೀಕ್ಷಾಘಟ್ಟವಾದರೆ, ಆ ಬಳಿಕ ಬರಲಿರುವ ಮರಣಾನಂತರದ ಅವಧಿಯು (ಪಾರಲೌಕಿಕ ಜೀವನವು) ಇಹಜೀವನದಲ್ಲಿ ಮನುಷ್ಯನು ನೀಡಿದ ಪರೀಕ್ಷಾಘಟ್ಟದ ಫಲಿತಾಂಶವನ್ನು ಅನುಭವಿಸುವ ಶಾಶ್ವತ ಕಾಲಘಟ್ಟವಾಗಿದೆ.

ಭೂಮಿಯಲ್ಲಿ ಮಾನವ ಸಂತತಿ ನಿರ್ನಾಮವಾದ ಬಳಿಕ, ಅವನೊಂದು ಇತಿಹಾಸವಾಗಿ ಮಾರ್ಪಟ್ಟ ಬಳಿಕ ಅವನು ತನ್ನ ಪಾರಲೌಕಿಕ ಜೀವನದ ಮೊದಲ ಹಂತವನ್ನು ಪ್ರವೇಶಿಸುವನು; ಅದು ಮಹಾತೀರ್ಪಿನ (The day of judjement) ದಿನವಾಗಿರುವುದು. ಆ ದಿನ ಜನರ ನೈಜಪ್ರಭುವೂ, ಅವರ ಸೃಷ್ಟಿಕರ್ತನೂ ಆದ ದೇವನು ಜನರೆದುರು ಪ್ರತ್ಯಕ್ಷವಾಗಿ ಕಾಣಿಸಿಕೊಂಡು, ಅವರವರ ಕರ್ಮಕ್ಕನುಸಾರವಾಗಿ ಪ್ರತಿಫಲ ನೀಡಲಿರುವನು. ಸತ್ಕರ್ಮಿಯೋರ್ವನು ಪ್ರತಿಫಲದ ರೂಪದಲ್ಲಿ ಶಾಶ್ವತ ಸ್ವರ್ಗವನ್ನು ಪಡೆದರೆ, ದುಷ್ಕರ್ಮಿಯು ತನ್ನ ಕರ್ಮಕ್ಕನುಸಾರವಾಗಿ ನರಕದಲ್ಲಿ ಸದಾ ಶಿಕ್ಷೆಗೊಳಗಾಗುತ್ತಲೇ ಇರುವನು.

'ತನ್ನ ಇಹಲೋಕದ ಈ ಬದುಕು ಹೇಗಿರಬೇಕು?' ಅಥವಾ 'ದೇವನು ನೀಡಿರುವ ಮೂಲಭೂತ ಸೌಕರ್ಯಗಳನ್ನು ತಾನು ಹೇಗೆ ಬಳಸಿಕೊಂಡು ಜೀವಿಸಬೇಕು' ಎಂಬುದನ್ನು ದೇವನ ಸೃಷ್ಟಿಯ ಹಿಂದಿರುವ ಈ ಯೋಜನೆಯ ಬೆಳಕಿನಲ್ಲಿ ಮಾನವನು ಸರಿಯಾಗಿ ಮನಗಾಣಲು ಸಾಧ್ಯ. ಇಲ್ಲಿನ ದೇವನಿಯೋಜಿತ 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ಅನ್ನು ದೇವನಿಚ್ಛೆಗನುಸಾರವಾಗಿ ಬಳಸಿಕೊಂಡು ಜೀವಿಸುವುದು, 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ನ ಸದ್ಬಳಕೆಯಾದರೆ, ಇದಕ್ಕೆ ತದ್ವಿರುದ್ಧವಾಗಿ ಮನುಷ್ಯನು ಅದನ್ನು ತನ್ನ ಸ್ವೇಚ್ಛೆಗನುಗುಣವಾಗಿ ಬಳಸಿಕೊಂಡು ಜೀವಿಸುವುದು 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ನ ದುರ್ಬಳಕೆಯಾಗಿದೆ.

"ಲೈಫ್ ಸಪೋರ್ಟಿಂಗ್ ಸಿಸ್ಟಮ್" ಅನ್ನು ದೇವನಿಚ್ಛೆಗನುಗುಣವಾಗಿ ಬಳಸಿಕೊಂಡು ಜೀವಿಸುವುದರಿಂದ ಅದು ಅವನ ಪಾಲಿಗೆ ಸಕರಾತ್ಮಕ ಫಲಿತಾಂಶವನ್ನು ನೀಡುವುದರೊಂದಿಗೆ ಈ ಇಹಜೀವನದ ಅವನ ಪಾಲಿನ ಪರೀಕ್ಷೆಯನ್ನು ಸುಲಲಿತಗೊಳಿಸುವುದು. ಅರ್ಥಾತ್ ಖುದ್ದು 'ಲೈಫ್

ಸಪೋರ್ಟಿಂಗ್ ಸಿಸ್ಟಮ್' ಅವನ ಪಾಲಿಗೆ 'ಟೆಸ್ಟ್ ಸಪೋರ್ಟಿಂಗ್ ಸಿಸ್ಟಮ್' (Test Supporting System) ಆಗಿ ಬದಲಾಗುವುದು. ಇದಕ್ಕೆ ತದ್ವಿರುದ್ಧವಾಗಿ ಅವನು ಅದನ್ನು ತನ್ನ ಸ್ವೇಚ್ಛೆಗನುಗುಣವಾಗಿ ಬಳಸಿಕೊಂಡು ಜೀವಿಸಿದರೆ, ಅದರ ನಕರಾತ್ಮಕ ಫಲಿತಾಂಶವಾಗಿ, 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ಅನ್ನು 'ಎಂಜಾಯ್ ಸಪೋರ್ಟಿಂಗ್ ಸಿಸ್ಟಮ್' ಅನ್ನಾಗಿ ದುರ್ಬಳಕೆ ಮಾಡಿಕೊಂಡಂತಾಗುವುದು. ಮೊದಲನೆಯ ಉದಾಹರಣೆಯು, 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ನ ಸದ್ಬಳಕೆಯ ಕಾರಣದಿಂದ 'ಜವಾಬ್ದಾರಿಯುತ ನಡವಳಿಕೆ' ಎಂದು ಕರೆಯಲ್ಪಟ್ಟರೆ, ಎರಡನೆಯದು; ಮಾನವನು ತನ್ನ ಜೀವನದ ನೈಜಉದ್ದೇಶವನ್ನರಿಯದೆ ತನ್ನ ಆಯಸ್ಸನ್ನು ಕೇವಲ ತಿಂದುಂಡು, ಮೋಜು ಮಾಡುತ್ತಾ ಕಳೆದು, ಕೊನೆಗೊಂದು ದಿನ ಮರಣ ಹೊಂದುವ ಮೂಲಕ ಪ್ರಾಣಿಗಳಂತೆ ಜೀವಿಸಿ ಹೋದ ಕಾರಣ, 'ಬೇಜವಾಬ್ದಾರಿಯುತ ನಡವಳಿಕೆ' ಎಂದು ಕರೆಯಲ್ಪಡುವುದು.

ಆಧುನಿಕ ಯುಗದಲ್ಲಿ ನಡೆಯುತ್ತಿರುವ ಹೊಸ ಹೊಸ ವೈಜ್ಞಾನಿಕ ಅನ್ವೇಷಣೆಗಳ ಮುಖಾಂತರ, ಮಾನವ ಜೀವನ ಹಾಗೂ "ಲೈಫ್ ಸಪೋರ್ಟಿಂಗ್ ಸಿಸ್ಟಮ್' ಅನ್ನು ಅರಿಯುವುದು ಹಿಂದೆಂದಿಗಿಂತಲೂ ಹೆಚ್ಚು ಸುಲಭ ಹಾಗೂ ಸರಳವಾಗಿದೆ. ಆಧುನಿಕ ಜಗತ್ತಿನ ಮಾನವನಿಗೆ ಈ ಎಲ್ಲಾ ಆಧುನಿಕ ವಿಜ್ಞಾನದ ಅನ್ವೇಷಣೆಗಳು, ತನ್ನ ಜೀವನದ ನೈಜ ಉದ್ದೇಶವೇನು? ಎಂಬುದರ ಕುರಿತು ಗಂಭೀರವಾಗಿ ಚಿಂತಿಸಲು; ತನ್ನ ಮೇಲೆ ಕೊಡುಗೆಗಳ ವರ್ಷಧಾರೆಯನ್ನು ಸುರಿಯುತ್ತಿರುವ ಆ ಮಹಾದಾನಿಯನ್ನು ಗುರುತಿಸಿ ಅವನಿಚ್ಛೆಯಂತೆ ಬದುಕನ್ನು ರೂಪಿಸಿಕೊಳ್ಳಲು ಬೇಕಾದ ಅಡಿಪಾಯವಾಗಬೇಕಿತ್ತು.

ಆದರೆ ಫಲಿತಾಂಶ ಇದಕ್ಕೆ ತದ್ವಿರುದ್ಧವಾಯಿತು. ಮನುಷ್ಯನು ದೇವನ ಕೊಡುಗೆಯಾದ "ಲೈಫ್ ಸಪೋರ್ಟಿಂಗ್ ಸಿಸ್ಟಮ್' ಅನ್ನು 'ಟೆಸ್ಟ್ ಸಪೋರ್ಟಿಂಗ್ ಸಿಸ್ಟಮ್' ಆಗಿ ಬಳಸಿಕೊಳ್ಳುವುದರಲ್ಲಿ ಜೀವನದ ಉದ್ದೇಶ ಅಡಗಿದೆ ಎಂಬುದನ್ನು ಅರಿಯುವಲ್ಲಿ ಸಂಪೂರ್ಣ ವಿಫಲನಾದನು. ಅವನು, "ಲೈಫ್ ಸಪೋರ್ಟಿಂಗ್ ಸಿಸ್ಟಮ್' ಅನ್ನು 'ಎಂಜಾಯ್ ಸಪೋರ್ಟ್ ಸಿಸ್ಟಮ್' ಆಗಿ ಬಳಸಿಕೊಂಡು, ಬದುಕಿರುವುದೇ ಮೋಜು ಮಾಡುವುದಕ್ಕೆ ಎನ್ನುತ್ತಾ ಕಾಲಕಳೆಯುತ್ತಿದ್ದಾನೆ. ಇದರ ಫಲಿತಾಂಶವೇನಾಯಿತೆಂದರೆ, ಜೀವನದಲ್ಲಿ ಹೆಚ್ಚು

ಸಂತೋಷವಾಗಿರಬೇಕೆಂದರೆ, "ಹೆಚ್ಚೆಚ್ಚು ಸಂಪಾದಿಸಬೇಕು, ಹೆಚ್ಚೆಚ್ಚು ಸಾಮಾನು-ಸಲಕರಣೆಗಳನ್ನು ಸಂಗ್ರಹಿಸಬೇಕು' ಎಂಬುದನ್ನಾತ ತನ್ನ ಜೀವನದ ಮೂಲಮಂತ್ರವನ್ನಾಗಿಸಿಕೊಂಡ.

ಈ ಸಂದರ್ಭದಲ್ಲಿ ನನ್ನ ಜೀವನದ ಪಾಠಪ್ರದ ಅನುಭವವೊಂದು ನನಗೆ ನೆನಪಿಗೆ ಬರುತ್ತಿದೆ. ಆ ಘಟನೆಯು ಪ್ರಸಕ್ತ ಪರಿಸ್ಥಿತಿಗೆ ಅನುಗುಣವಾಗಿ ಅದ್ಭುತ ವಿವರಣೆಯನ್ನೂ ನಮಗೆ ಮನದಟ್ಟು ಮಾಡಿಸುತ್ತದೆ. 1972ನೆಯ ಇಸವಿಯಲ್ಲಿರಬೇಕು; ನಾನು ರಾಜಸ್ಥಾನದಲ್ಲಿರುವ ಒಂದು ಪ್ರದೇಶಕ್ಕೆ ಭೇಟಿ ನೀಡಿದೆ. ಆ ಪ್ರಯಾಣದಲ್ಲಿ ನನ್ನೊಂದಿಗೆ ಮುಫ್ತಿ ಜಲಾಲುದ್ದೀನ್ ಖಾಸ್ಮಿ ಮತ್ತಿತರ ಸಂಗಡಿಗರಿದ್ದರು. ಅಲ್ಲೊಂದು ಜನವಸತಿಯೇ ಇರದ ಎತ್ತರದ ಪರ್ವತವೊಂದಿತ್ತು. ಆ ಪರ್ವತವನ್ನೇರಲು ರಸ್ತೆಯನ್ನು ಕೂಡ ನಿರ್ಮಿಸಲಾಗಿತ್ತು.

ನಾವು ಜೀಪಿನ ಮೂಲಕ ಆ ಪರ್ವತದ ತುದಿಗೆ ತಲುಪುತ್ತಿದ್ದಂತೆಯೇ ನಾವು ಊಹಿಸದೇ ಇರದ ವಿಚಿತ್ರ ದೃಶ್ಯವೊಂದು ನಮಗೆದುರಾಯಿತು; ಜನವಸತಿಯೇ ಇರದ ಆ ನಿರ್ಜನ ಪ್ರದೇಶದಲ್ಲಿ ವಿಶಾಲವಾದ ಸಭಾಂಗಣವಿದ್ದ ದೊಡ್ಡ ಕಟ್ಟಡವೊಂದನ್ನು ನಿರ್ಮಿಸಲಾಗಿತ್ತು. ಬಹುಶಃ ಯಾವುದೋ ರಾಜನು ಇದನ್ನು ನಿರ್ಮಿಸಿದ್ದಿರಬಹುದು. ಹಚ್ಚಿದ್ದ ಬಣ್ಣವೂ ಅದುವರೆಗೆ ಮಾಸಿರದಿದ್ದ ಆ ಕಟ್ಟಡ ಮತ್ತದರ ಆಸುಪಾಸಿನಲ್ಲಿ ನಮಗೆ ಯಾವುದೇ ವ್ಯಕ್ತಿಯಂತೂ ಕಾಣ ಸಿಗಲಿಲ್ಲ. ಅಲ್ಲಿ ನಾವು ಕಂಡಿದ್ದು ಕಟ್ಟಡದ ತುಂಬೆಲ್ಲಾ ತುಂಬಿಹೋಗಿದ್ದ ಸಹಸ್ರಾರು ಸಂಖ್ಯೆಗಳ ಕೋತಿಗಳನ್ನು. ಅವುಗಳು ಪರಸ್ಪರ ಕಿರುಚಾಡುತ್ತಾ, ಒಳಗೂ ಹೊರಗೂ ಜಿಗಿದಾಡುತ್ತಿದ್ದವು. ತಮಗಾಗಿ ನಿರ್ಮಿಸಿದ್ದಲ್ಲದ ಕಟ್ಟಡವೊಂದನ್ನು ಆಕ್ರಮಿಸಿಕೊಂಡ ಕೋತಿಗಳ ಪರಸ್ಪರ ಅರಚಾಟ, ಜಿಗಿದಾಟ ಅವುಗಳ ಕುಚೇಷ್ಠೆ ಇವೆಲ್ಲವೂ ನಮಗೆ ವಿಲಕ್ಷಣ ದೃಶ್ಯವಾಗಿ ಕಂಡಿತು. ಇಂತಹ ವಿಲಕ್ಷಣ ಸನ್ನಿವೇಶದಲ್ಲಿ ಕಟ್ಟಡದ ಒಳಗೆ ಪ್ರವೇಶಿಸಲಾಗದ ನಾವು, ಅದನ್ನು ಕೇವಲ ಹೊರಗಡೆಯಿಂದಲೇ ನೋಡಿಕೊಂಡು ವಾಪಾಸ್ಸಾಗಬೇಕಾಯಿತು.

ನಾನು ಅಲ್ಲಿದ್ದ ಅಷ್ಟೂ ಹೊತ್ತು, ಆ ದೃಶ್ಯವನ್ನೇ ನೋಡುತ್ತಾ ಹೀಗೆ ಆಲೋಚಿಸತೊಡಗಿದೆ, 'ಈ ಕಪಿಗಳು ಕಟ್ಟಡವನ್ನೇನೋ ಆಕ್ರಮಿಸಿಕೊಂಡಿವೆ. ಆದರೆ, ಅವುಗಳಿಗೆ ಈ ಕಟ್ಟಡವನ್ನು ನಿರ್ಮಿಸಿದ್ದು ಯಾರು? ಅದನ್ನು ನಿರ್ಮಿಸಿರುವುದರ ಹಿಂದಿರುವ ಅವರ ಉದ್ದೇಶ ಏನು? ಎನ್ನುವುದರ ಕುರಿತು ಯಾವ ಪರಿವೆಯೂ ಇಲ್ಲ. ಕಪಿಗಳ ಅರಚಾಟ, ಜಿಗಿದಾಟ ಮತ್ತು ಅವುಗಳು ತಮ್ಮ ಕುಚೇಷ್ಠೆಯನ್ನು ತೋರಿಸುವ ರಂಗಸ್ಥಳಕ್ಕಾಗಿ ಆ ಕಟ್ಟಡವನ್ನು

ನಿರ್ಮಿಸಿದ್ದಲ್ಲವೆಂಬುದಂತೂ ಸ್ಪಷ್ಟ. ಆದರೆ, ಇದ್ಯಾವುದರ ಕುರಿತೂ ಕೊಂಚವೂ ಆಸಕ್ತಿ ಇಲ್ಲದ ಕಪಿಗಳಿಂದ ಕಟ್ಟಡದ ದುರ್ಬಳಕೆಯಾಗುತ್ತಿತ್ತು. ಅದನ್ನು ನಿರ್ಮಿಸಿದವರ ಉದ್ದೇಶ ಅದರ ಸದ್ಬಳಕೆಯಾಗಿತ್ತು.

ಆ ಬಳಿಕ ನಾನು ಹೀಗೆ ಚಿಂತಿಸತೊಡಗಿದೆ, 'ಈ ಕಟ್ಟಡವನ್ನು ಇದೇ ಸ್ಥಿತಿಯಲ್ಲಿ ಬಿಟ್ಟರೆ ಅದು ಈ ಕಪಿಗಳ ಹಾವಳಿಯಿಂದ ಶಿಥಿಲವಾಗುವುದು ಖಚಿತ. ಹಾಗಾಗಾಬಾರದೆಂದಾದರೆ ಒಂದೋ ಕಟ್ಟಡದ ಮಾಲಕ ಖುದ್ದು ಕಪಿಗಳನ್ನು ಹಿಡಿದು ಶಿಕ್ಷಿಸಬೇಕು, ಇಲ್ಲವಾದರೆ ಆ ಸುಂದರ ಕಟ್ಟಡವನ್ನು ಯಾರಿಗಾಗಿ ನಿರ್ಮಿಸಲಾಗಿತ್ತೋ, ಆ ಜವಾಬ್ದಾರಿಯುತ ಜನರ ವಶಕ್ಕೊಪ್ಪಿಸಬೇಕು.' ಈ ಮೇಲಿನ ಉದಾಹರಣೆಯ ಕುರಿತು ಸ್ವಲ್ಪ ಚಿಂತಿಸಿ ನೋಡಿ!. ಕಟ್ಟಡವನ್ನು ನಿರ್ಮಿಸಿದವರು ಅದನ್ನು ಒಂದು ನಿರ್ದಿಷ್ಟ ಸದುದ್ದೇಶಕ್ಕಾಗಿಯೇ ನಿರ್ಮಿಸಿದ್ದರು. ಅದನ್ನು ನಿರ್ಮಿಸಿದವರ ಸದುದ್ದೇಶಕ್ಕನುಗುಣವಾಗಿ ಆ ಕಟ್ಟಡದ ಸದ್ಬಳಕೆಯಾಗಬೇಕಿತ್ತು. ಆದರೆ, ಕಪಿಗಳು ಆ ಕಟ್ಟಡವನ್ನು ಹೊಕ್ಕು, ತಮ್ಮ ಕುಚೇಷ್ಟೆಗಳ ತಾಣವನ್ನಾಗಿ ಮಾಡಿಕೊಳ್ಳುವ ಮೂಲಕ ಅದನ್ನು ಸಂಪೂರ್ಣವಾಗಿ ದುರ್ಬಳಕೆ ಮಾಡುತ್ತಿವೆ.

ಈ ಉದಾಹರಣೆಯು ದೊಡ್ಡ ಪ್ರಮಾಣದಲ್ಲಿ ಪೂರ್ತಿ ಮನುಷ್ಯ ಜಗತ್ತನ್ನು ಪ್ರತಿಬಿಂಬಿಸುವಂತಿದೆ. ಪ್ರಸಕ್ತ ಭೂ–ಜಗತ್ತು ಮೇಲೆ ಉದಾಹರಿಸಿದ ಕಟ್ಟಡದಂತಾಗಿ ಮಾರ್ಪಟ್ಟಿದೆ. ಸಂಪೂರ್ಣ ಜಗತ್ತಿನಲ್ಲಿ ಎಲ್ಲೆಂದರಲ್ಲಿ ಉತ್ತರದಾಯಿತ್ವದ ಪ್ರಜ್ಞೆಯೇ ಇರದ ಬೇಜವಾಬ್ದಾರಿಯುತ ಸ್ತ್ರೀ–ಪುರುಷರೇ ತುಂಬಿ ಹೋಗಿದ್ದಾರೆ. ಅವರೆಲ್ಲರೂ ಈ ಜಗತ್ತನ್ನು ಕೇವಲ ತಮ್ಮ ಬಯಕೆ ಮತ್ತು ತಮ್ಮ ಮನೋಕಾಮನೆಗಳನ್ನು ಪೂರೈಸಿಕೊಳ್ಳುವ ತಾಣವೆಂದೇ ಪರಿಗಣಿಸಿದ್ದಾರೆ. ಈ ಜಗತ್ತನ್ನು ನಿರ್ಮಿಸಿದವನಾರು? ಇದನ್ನು ನಿರ್ಮಿಸಿರುವುದರ ಹಿಂದಿರುವ ಅವನ ನೈಜ ಉದ್ದೇಶವೇನು? ಎನ್ನುವುದರ ಕುರಿತು ಚಿಂತಿಸುವ ಗೊಡವೆಗೇ ಅವರು ಹೋಗುತ್ತಿಲ್ಲ.

ಒಂದೆಡೆ, ಆಧುನಿಕ ಜಗತ್ತಿನಲ್ಲಿ 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ನ ಕುರಿತು ಹೆಚ್ಚೆಚ್ಚು ವೈಜ್ಞಾನಿಕ ಆವಿಷ್ಕಾರಗಳು ನಡೆದರೆ, ಇನ್ನೊಂದೆಡೆ ಜನರ ಮನಃಸ್ಥಿತಿಯೂ ಬದಲಾಗುತ್ತಲೇ ಹೋಯಿತು. ಇದು ಜಾಗತಿಕ ಮಟ್ಟದಲ್ಲಿ ಹೊಸದೊಂದು ಸಂಸ್ಕೃತಿಯ ಹುಟ್ಟಿಗೆ ಕಾರಣವಾಯಿತು. ಅದನ್ನು "ಎಂಜಾಯ್ಮೆಂಟ್ ಕಲ್ಚರ್' (Enjoyment Culture) ಅಥವಾ 'ಮೋಜಿನ ಸಂಸ್ಕೃತಿ ' ಎಂದು ಕರೆಯಲಾಗುತ್ತದೆ. ಈ ಮೋಜಿನ ಸಂಸ್ಕೃತಿಯ ಗುಲಾಮನಾದ ಆಧುನಿಕ ಜಗತ್ತಿನ

ಮನುಷ್ಯನು, 'ಈ ಭೂಮಿಯಲ್ಲಿರವುದೆಲ್ಲವೂ ಮನುಷ್ಯನ ಮೋಜು ಅಥವಾ ಅವನ ಮನರಂಜನೆಗಾಗಿದೆ' ಎಂದು ಕಲ್ಪಿಸಿಕೊಂಡು ಅದೇ ದಿಕ್ಕಿನಲ್ಲಿ ಸಾಗತೊಡಗಿದನು. ಅವನು ವಾಸಿಸುತ್ತಿದ್ದ ಪರಿಸರದ ಇನ್ನುಳಿದ ಜನರ ಜೀವನಶೈಲಿಯಿಂದ ಪ್ರಭಾವಿತವಾಗಿದ್ದೇ ಇದಕ್ಕೆ ಕಾರಣವೇ ಹೊರತು, ಅವನ ನಿಸರ್ಗದ ಕುರಿತ ಅವನ ಚಿಂತನೆಯ ಕಾರಣದಿಂದಲ್ಲ. ಅವನು ತನ್ನನ್ನು ತಾನು ಈ ಮೋಜಿನ ಜೀವನ ಶೈಲಿಗೆ ಒಡ್ಡಿಕೊಂಡ ಕಾರಣ, 'ಲೈಫ್ ಸಪೋರ್ಟಿಂಗ್ ಸಿಸ್ಟಮ್' ಅನ್ನು 'ಎಂಜಾಯ್ ಸಪೋರ್ಟ್ ಸಿಸ್ಟಮ್' ಆಗಿ ಕಲ್ಪಿಸಿಕೊಂಡು ಅದರಂತೆ ಜೀವಿಸತೊಡಗಿದ. ಈ ಎಲ್ಲಾ ಕಾರಣಗಳಿಂದಾಗಿ ನಾವು ಜೀವಿಸುತ್ತಿರುವ ಈ ಸಮಾಜದಲ್ಲಿ ಮಾನವೀಯತೆಯೊಂದಿಗೆ ಬೆರೆಯುವ ಜನರಿಗಿಂತ ಹೆಚ್ಚು ಜಾನುವಾರಗಳಂತೆ ವರ್ತಿಸುವ ಜನರೇ ನಮಗೆ ಹೆಚ್ಚಾಗಿ ಕಂಡುಬರುತ್ತಾರೆ.

ಜನರು ಮತ್ತು ಜಾನುವಾರುಗಳ ನಡುವೆ ಇರುವ ದೊಡ್ಡ ವ್ಯತ್ಯಾಸವೇನು?, ಜಾನುವಾರುಗಳ ಮನಸ್ಥಿತಿ ಏನೆಂದರೆ, ಅವುಗಳು ಕೇವಲ ತಮ್ಮ ಆವಶ್ಯಕತೆಗಷ್ಟೇ ಮಹತ್ವ ನೀಡುತ್ತವೆ. ಆದರೆ, ಮನುಷ್ಯನು ತನ್ನ ಆವಶ್ಯಕತೆ ಮತ್ತು ಹಿತಾಸಕ್ತಿಗಳ ಜೊತೆಗೆ ಇನ್ನಿತರ ತನ್ನ ಸಾಮಾಜಿಕ ಹೊಣೆಗಾರಿಕೆಗಳನ್ನು ಅರಿತಿದ್ದಾನೆ ಮತ್ತವುಗಳ ಬೇಡಿಕೆಯನ್ನು ಈಡೇರಿಸಲು ಹಗಲಿರುಳು ಶ್ರಮಿಸುತ್ತಾನೆ.

ಆದರೆ, ಇಂದಿನ ಜಗತ್ತನ್ನು ನೋಡುತ್ತಿದ್ದರೆ, ಜನ ಮತ್ತು ಜಾನುವಾರುಗಳ ನಡುವಿನ ಈ ವ್ಯತ್ಯಾಸವೂ ಮರೆಯಾಗಿದೆ ಎನ್ನಿಸದಿರಲಾರದು. ಇಂದಿನ ಆಧುನಿಕ ಜಗತ್ತಿನ ಮನುಷ್ಯನ ಜೀವನಶೈಲಿ ಜಾನುವಾರುಗಳ ಜೀವನಶೈಲಿಗಿಂತ ಹೆಚ್ಚು ಭಿನ್ನವಾಗಿಲ್ಲ. ಕೇವಲ ಬಾಹ್ಯ ರೂಪವೊಂದನ್ನು ಹೊರತುಪಡಿಸಿದರೆ ಉಳಿದದ್ದೆಲ್ಲವೂ ಹೆಚ್ಚು–ಕಮ್ಮಿ ಒಂದೇ ಎನ್ನಿಸುವ ಮಟ್ಟಿಗೆ ಮನುಷ್ಯನಿಂದು ತನ್ನ ಪ್ರಕೃತಿ ತನಗೆ ನೀಡಿದ ಉನ್ನತ ಮಟ್ಟದಿಂದ ಕೆಳಗೆ ಜಾರಿದ್ದಾನೆ.

ನಾವು ಅಲಕ್ಷಿಸಿಬಿಡುವಷ್ಟು ಸಣ್ಣ ವಿಷಯವೇನಲ್ಲವಿದು!. ಪ್ರಕೃತಿ ತಿಳಿಸಿಕೊಟ್ಟ ಮಾರ್ಗವನ್ನು ತೊರೆದು, ಸ್ವೇಚ್ಛೆಯ ಮಾರ್ಗ ಅನುಸರಿಸುವ ಮೂಲಕ ಪ್ರಕೃತಿಯ ವಿರುದ್ಧವೇ ಸಮರ ಸಾರುವುದು ಬಹಳ ಗಂಭೀರ ವಿಷಯವಾಗಿರುವುದು. ಪ್ರಕೃತಿಯ ಮಾರ್ಗವನ್ನು ತೊರೆಯುವುದು ನಮ್ಮ ಪಾಲಿಗೆ ಸದಾ ನಷ್ಟವನ್ನು ತಂದೊಡ್ಡುವ ವಿಷಯವೆಂಬುದಂತೂ ಸ್ಪಷ್ಟ. ನಷ್ಟದ ಮಟ್ಟವೂ ಇಲ್ಲಿ ದುಪ್ಪಟ್ಟು.

ಮರಣದ ಮೊದಲಿನ ಅವಧಿಯಲ್ಲಿ ಒಂದಷ್ಟು ನಷ್ಟವಾದರೆ, ಮರಣಾನಂತರ ಅವಧಿಯದ್ದು ಎಂದಿಗೂ ಭರಿಸಲಾಗದಷ್ಟು ಮಹಾನಷ್ಟ.

ಮನುಷ್ಯನು ತನಗೆ ಇಲ್ಲಿ ನೀಡಲಾದ ಸ್ವಾತಂತ್ರ್ಯವನ್ನು ದುರುಪಯೋಗಗೊಳಿಸಿಕೊಳ್ಳಲು ಶಕ್ತನಾಗಿದ್ದರೂ, ಆ ದುರುಪಯೋಗದಿಂದ ಉಂಟಾಗುವ ವಿನಾಶಕಾರಿ ಪರಿಣಾಮಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಸಂಪೂರ್ಣ ಅಸಮರ್ಥನಾಗಿರುವನು. ಇಂದಿನ ಆಧುನಿಕ ಮನುಷ್ಯನು ಎದುರಿಸುತ್ತಿರುವ ಮಹಾ ಅಪಾಯವೂ ಇದೇ ಆಗಿದೆ.

ಪ್ರಕೃತಿಗೆ ತದ್ವಿರುದ್ಧವಾದ ನಡೆಯಿಂದ ಮರಣದ ಮೊದಲು ಅನುಭವಿಸುವ ನಷ್ಟವೇನು? ಎಂಬುದನ್ನು ಮನುಷ್ಯನು ಖುದ್ದು ತನ್ನ ಅನುಭವದ ಮೂಲಕ ಮನದಟ್ಟು ಮಾಡಿಕೊಳ್ಳಲು ಸಾಧ್ಯ. ಪ್ರತಿಯೋರ್ವ ವ್ಯಕ್ತಿಯ ಮುಂದೆಯೂ, "ತಾನು ಅಲ್ಲಿಗೆ ತಲುಪಬೇಕು" ಎಂದುಕೊಳ್ಳುವ ತನ್ನ ಕನಸಿನ ಗಮ್ಯಸ್ಥಾನವೊಂದಿರುತ್ತದೆ. ತನ್ನಿಷ್ಟದ ಆ ಗಮ್ಯಸ್ಥಾನವನ್ನು ತಲುಪಲು ವ್ಯಕ್ತಿಯೋರ್ವನು ಹಗುಲಿರುಳೂ ಪರಿಶ್ರಮಪಡುತ್ತಾನೆ. ಅದಕ್ಕಾಗಿ ಅವನು ತನ್ನ ಹಣ–ಸಮಯ ಎಲ್ಲವನ್ನೂ ಪಣಕ್ಕಿಡುತ್ತಾನೆ. ಇದೆಲ್ಲದರ ಹೊರತಾಗಿಯೂ ಕೊನೆಗೊಂದು ದಿನ ಅವನು ನಿರಾಶೆಗೀಡಾಗುವುದನ್ನು ನಾವು ನೋಡುತ್ತೇವೆ. ಈ ಜಗತ್ತಿನಲ್ಲಿರುವ ಪ್ರತಿಯೋರ್ವ ವ್ಯಕ್ತಿ; ಆತ ಆಗರ್ಭ ಶ್ರೀಮಂತನಿರಲಿ ಅಥವಾ ಬಡವನೇ ಇರಲಿ ತನ್ನ ಆಯಸ್ಸನ್ನು ಮುಗಿಸಿ ಈ ಲೌಕಿಕ ಜೀವನದಿಂದ ನಿರ್ಗಮಿಸುವಾಗ ಒಂದು ತೆರನಾದ ಹತಾಶೆಯೊಂದಿಗೆ (with despair) ಮರಣಹೊಂದುತ್ತಾನೆ. ಸ್ತ್ರೀ–ಪುರುಷರೆಂಬ ಬೇಧವೂ ಇದಕ್ಕಿಲ್ಲ.

ಮನುಷ್ಯನು ಯಾವ ಗಮ್ಯಸ್ಥಾನವನ್ನು, ಯಾವ ಉನ್ನತಮಟ್ಟವನ್ನು ತಲುಪಲು ಪ್ರಯತ್ನಿಸುತ್ತಿರುವನೋ ಅದನ್ನು ತಲುಪಲು ಬೇಕಾದ ವ್ಯವಸ್ಥೆಯು ಈ ಲೋಕದಲ್ಲಂತೂ ಆತನಿಗೆ ಲಭ್ಯವಿಲ್ಲ. ತನ್ನೆಲ್ಲಾ ಪರಿಶ್ರಮವನ್ನು ವ್ಯಯಿಸಿಯೂ ತನ್ನ ಮನದಾಳದ ಬಯಕೆಯ ಮಟ್ಟವನ್ನು, ತಲುಪಲು ಸಾಧ್ಯವಾಗದೇ ಹೋಗುವುದೇ, ಅವನು ತನ್ನ ಕೊನೆಗಾಲದಲ್ಲಿ ಹತಾಶೆಗೊಳಗಾಗುವುದಕ್ಕೆ ಪ್ರಮುಖ ಕಾರಣ.

ಮನುಷ್ಯನ ದೇಹದಲ್ಲಿ ವಿಶೇಷವಾಗಿ ಐದು ಅತ್ಯದ್ಭುತ ಗ್ರಹಿಕಾ ಸಾಮರ್ಥ್ಯಗಳನ್ನು ಇರಿಸಲಾಗಿದೆ (Five faculties). ದೃಷ್ಟಿ ಸಾಮರ್ಥ್ಯ, ಸ್ಪರ್ಶ ಜ್ಞಾನ, ರುಚಿ ಗ್ರಹಿಕೆ ಅಥವಾ ಸಂವೇದನಾ ಶಕ್ತಿ, ಆಘ್ರಾಣ ಸಾಮರ್ಥ್ಯ ಮತ್ತು ಶ್ರವಣ ಶಕ್ತಿ ಇವುಗಳೇ ಆ ಐದು ಗ್ರಹಿಕಾ

ಸಾಮರ್ಥ್ಯಗಳು. ಇವುಗಳನ್ನು ನಮ್ಮ ಪಾರಿಭಾಷಿಕದಲ್ಲಿ ಪಂಚೇಂದ್ರಿಯಗಳೆಂದೂ ಕರೆಯಲಾಗುತ್ತದೆ (Five Sences). Sight, touch, taste, smell and hearing.

ಈ ಪಂಚೇದ್ರಿಯಗಳು ಮನುಷ್ಯನಿಗೆ ವಿಶಿಷ್ಟ ಅನುಭವವನ್ನು ನೀಡುತ್ತವೆ. ಇವುಗಳ ಪೈಕಿ ಪ್ರತಿಯೊಂದರಲ್ಲೂ ಸೃಷ್ಟಿಕರ್ತನು ಅವುಗಳದೇ ಆದ ವಿಶಿಷ್ಟತೆಯನ್ನು ಇರಿಸಿರುವನು. ಮನುಷ್ಯನ ಪಾಲಿಗೆ ವೀಕ್ಷಿಸುವುದರಲಿ, ಸ್ಪರ್ಶಿಸುವುದಾಗಲೀ, ರುಚಿ ನೋಡುವುದಾಗಲೀ, ಆಘ್ರಾಣಿಸುವುದಾಗಲೀ ಅಥವಾ ಕೇಳುವುದಾಗಲಿ ಪ್ರತಿಯೊಂದು ಕ್ರಿಯೆಯೂ ತನ್ನದೇ ಆದ ವಿಶಿಷ್ಟವೂ, ಅದ್ಭುತವೂ ಆದ ಅನುಭವವನ್ನು ನೀಡುತ್ತದೆ.

ಜಗತ್ತಿನ ಬೇರಾವ ಸೃಷ್ಟಿಗೂ ಈ ಗ್ರಹಿಕಾ ಸಾಮರ್ಥ್ಯಗಳ ಮೂಲಕ ಇಷ್ಟೊಂದು ವಿಶಿಷ್ಟ, ಆಹ್ಲಾದಕರ ಅನುಭವವನ್ನು ಅನುಭವಿಸುವ ಸಾಮರ್ಥ್ಯವಿಲ್ಲ. ಈ ಇಂದ್ರಿಯ ಸಾಮರ್ಥ್ಯಗಳನ್ನು ಆಹ್ಲಾದಿಸುವ (pleasure) ವಿಶಿಷ್ಟತೆ ಇರುವುದು ಕೇವಲ ಮನುಷ್ಯನಿಗಷ್ಟೇ ಆಗಿದೆ. ಈ ಪಂಚೇಂದ್ರಿಯಗಳ ಜೊತೆಗೆ ಮನುಷ್ಯನಿಗೆ ಆರನೇ ಇಂದ್ರಿಯವನ್ನೂ ನೀಡಲಾಗಿದೆ. ಅದನ್ನೇ ಆರನೇ ಇಂದ್ರಿಯ ಎನ್ನುತ್ತೇವೆ ನಾವು. ಮನುಷ್ಯನೊಳಗಿರುವ ಚಿಂತಿಸುವ ಸಾಮರ್ಥ್ಯಕ್ಕೆ (Thinking capacity) ಆರನೇ ಇಂದ್ರಿಯ ಅಥವಾ ಸಿಕ್ಸ್ತ್ ಸೆನ್ಸ್ (Sixth Sense) ಎನ್ನುವುದು ನಾವು. ಉಳಿದೆಲ್ಲಾ ಪಂಚೇದ್ರಿಯಗಳಿಗಿಂತ ಈ ಆರನೇ ಇಂದ್ರಿಯವು ಮನುಷ್ಯನಿಗೆ ಅತಿಹೆಚ್ಚು ಆಹ್ಲಾದಕರ ಅನುಭವವನ್ನು ನೀಡುತ್ತದೆ. ಚಿಂತಿಸುವ ಸಾಮರ್ಥ್ಯ ಮನುಷ್ಯನಿಗೆ ದೇವನಿಂದ ದೊರೆತ ವಿಶಿಷ್ಟ ಕೊಡುಗೆ ಎಂಬುದು ದೊಡ್ಡ ವಾಸ್ತವ. ಚಿಂತನಾ ಸಾಮರ್ಥ್ಯ ಮನುಷ್ಯನ ಪಾಲಿಗೆ ಅಮಿತ ಆನಂದವನ್ನು ಅನುಭವಿಸುವ ನಿಧಿಯಾಗಿದೆ. ಮನುಷ್ಯನ ಚಿಂತನಾ ಕ್ರಿಯೆಯು ಹೊರಪ್ರಪಂಚಕ್ಕೆ ಗೋಚರಿಸುವುದಿಲ್ಲವಾದರೂ, ಖುದ್ದು ಚಿಂತಿಸುವನ ಪಾಲಿಗೆ ಅದೊಂದು ವರ್ಣನಾತೀತ ಅನುಭವವನ್ನು ನೀಡುವ ವಿಶಿಷ್ಟ ಸಾಧನವಾಗಿದೆ.

ಮನುಷ್ಯನು ಲೌಕಿಕ ಜೀವನದಲ್ಲಿ ಈ ಚಿಂತನಾ ಕ್ರಿಯೆಯ ಮೂಲಕ ಆಹ್ಲಾದಕರ ಅನುಭವವನ್ನು ಪಡೆಯುತ್ತಾನಾದರೂ, ಅವುಗಳನ್ನು ಪ್ರಾಯೋಗಿಕವಾಗಿ ಪೂರೈಸಿಕೊಳ್ಳುವ ಯಾವುದೇ ಸಲಕರಣೆಗಳು ಅವನಗಿಲ್ಲಿ ದೊರಕುವುದಿಲ್ಲ. ಮನುಷ್ಯನು ಸ್ವಭಾವತಃ ಅಮಿತ ಆಸೆ–ಆಕಾಂಕ್ಷೆ ಹಾಗೂ ಬಯಕೆಗಳೊಂದಿಗೆ ಜನಿಸುತ್ತಾನಾದರೂ, ಕೆಲವೇ ಸಮಯದಲ್ಲಿ ಪ್ರತಿಯೋರ್ವ

ಸ್ತ್ರೀ–ಪುರುಷರೂ ತಮ್ಮ ಈಡೇರದ ಬಯಕೆಗಳೊಂದಿಗೆ (Unfulfilled desires) ಮರಣ ಹೊಂದುತ್ತಾರೆ.

ಇದಕ್ಕೆ ಪ್ರಮುಖ ಕಾರಣವೇನೆಂದರೆ ಮನುಷ್ಯನಿಗೆ ಪ್ರಕೃತಿದತ್ತವಾದ ಅಮಿತ ಬಯಕೆಗಳೇನೋ ಇವೆ. ಆದರೆ, ಅವುಗಳನ್ನು ಪೂರೈಸಿಕೊಳ್ಳಲು ಬೇಕಾದ ಯಾವುದೇ ಸರಿಯಾದ ಸವಲತ್ತುಗಳು, ಸಾಧನಗಳು ಈ ಲೌಕಿಕ ಪ್ರಪಂಚದಲ್ಲಿ ಅಸ್ತಿತ್ವದಲ್ಲಿಲ್ಲ.

ಇದರ ಹಿಂದಿರವು ಕಾರಣದ ಕುರಿತು ನಾವು ಆಧ್ಯಾತ್ಮಿಕ ಅಧ್ಯಯನ ನಡೆಸಿದಲ್ಲಿ, ಸೃಷ್ಟಿಕರ್ತನ ಸೃಷ್ಟಿಯ ಯೋಜನೆಯನ್ವಯ; ಮನುಷ್ಯನ ಪ್ರಕೃತಿದತ್ತವಾದ ಬಯಕೆಗಳನ್ನು ಪೂರೈಸಲು ಬೇಕಾದ ಸಾಮಾನು–ಸಲಕರಣೆಗಳನ್ನು ಮರಣಪೂರ್ವ ಜೀವನದ ಅವಧಿಯಲ್ಲಿ ಇರಿಸಲಾಗಿಲ್ಲ. ಮರಣಾನಂತರದ ಪಾರಲೌಕಿಕ ಜೀವನದಲ್ಲಿ ಮನುಷ್ಯನ ಮನದಾಳದ ಬಯಕೆಗಳೆಲ್ಲವೂ ಈಡೇರುವವು ಎಂಬುದು ನಮಗೆ ವ್ಯಕ್ತವಾಗುವುದು. ಈ ಲೌಕಿಕ ಜೀವನದಲ್ಲಿ ಮನುಷ್ಯನು ತನ್ನ ಸೃಷ್ಟಿಕರ್ತನ ಸೃಷ್ಟಿಯ ನಿಯಮದನ್ವಯ ಜೀವನವನ್ನು ರೂಪಿಸಿಕೊಂಡು, ಶಾಶ್ವತ ಪಾರಲೌಕಿಕ ಜೀವನಕ್ಕೆ ಪೂರ್ವ ತಯಾರಿ ನಡೆಸಲೆಂದು, ಅವನು ಜನಿಸುತ್ತಲೇ ಪ್ರಕೃತಿದತ್ತವಾಗಿ ಅವನೊಳಗೆ ಈ ಬಯಕೆಗಳ ಭಂಡಾರಗಳನ್ನು ಇರಿಸಲಾಗುತ್ತದೆ.

ಬೇರೆಲ್ಲಾ ಜೀವಿಗಳಿಗೆ ಹೋಲಿಸಿದರೆ ಮನುಷ್ಯನಿಗೆ ತನ್ನ "ನಾಳೆ" (Tomorrow) ಕುರಿತು ಹೆಚ್ಚು ಚಿಂತೆ ಕಾಡುತ್ತದೆ. ಈ ನಾಳಿನ ಕುರಿತ ಚಿಂತೆ ಇರುವುದು ಮನುಷ್ಯನೋರ್ವನಲ್ಲಿ ಮಾತ್ರ. ಜಾನುವಾರುಗಳು ದೇವನದೇ ಸೃಷ್ಟಿಗಳಾದರೂ, ಅವುಗಳಲ್ಲಿ ನಾಳಿನ ಕುರಿತ "ಚಿಂತೆ" ಅಥವಾ "ಪರಿಕಲ್ಪನೆ" ಯನ್ನು ಕಾಣಲು ಅಸಾಧ್ಯ. ಈ ವಿಶಿಷ್ಟತೆ ಮನುಷ್ಯನಿಗಷ್ಟೇ ಮೀಸಲು. ಅವುಗಳ ಸೀಮಿತ ಆಲೋಚನಾ ಶಕ್ತಿ ವರ್ತಮಾನವನ್ನಷ್ಟೇ (Present) ಗ್ರಹಿಸಬಲ್ಲದು. ಭವಿಷ್ಯದ (Future) ಕುರಿತು "ಕಲ್ಪಿಸಿಕೊಳ್ಳುವುದು" ಅವುಗಳಿಂದಾಗದ ಮಾತು. ಆದರೆ ಇವುಗಳಿಗೆ ತದ್ವಿರುದ್ಧವಾಗಿ, ಮನುಷ್ಯನೊಳಗೆ ನಾಳೆಯ ಅಥವಾ ಭವಿಷ್ಯದ ಕುರಿತ ಪರಿಕಲ್ಪನೆ ಬಹಳ ಬಲಿಷ್ಠವಾಗಿ ಬೇರೂರಿದೆ. ಆದರೆ, ಮನುಷ್ಯನು ತನ್ನ ಈ ಮನದಾಳದ ಪರಿಕಲ್ಪನೆಯ ನಾಳೆಯನ್ನು ತಲುಪಲು ಈ ಲೌಕಿಕ ಜಗತ್ತಿನಲ್ಲಂತೂ ಸಾಧ್ಯವಾಗುವುದಿಲ್ಲ ಎಂಬುದು ಪ್ರತಿಯೋರ್ವ ವ್ಯಕ್ತಿಯ ಪ್ರಾಯೋಗಿಕ ಅನುಭವವಾಗಿದೆ.

ಈ ಸೀಮಿತ ಜಗತ್ತಿನ ಲೌಕಿಕ ಬದುಕಿನಲ್ಲಿ ತನ್ನ ಪರಿಕಲ್ಪನೆಯ "ಅಸೀಮಿತ ಭವಿಷ್ಯ" ವನ್ನು ಸಾಧಿಸಲು ಅವನಿಗೆ ಸಾಧ್ಯವಿಲ್ಲ ಎಂಬ ವಾಸ್ತವದ ಸುಳಿವು ನಮಗಿದರಿಂದ ದೊರಕುತ್ತದೆ. ಮನುಷ್ಯನು ತನ್ನ ಪರಿಕಲ್ಪನೆಯ ಆ ಅಸೀಮಿತ ಬದುಕನ್ನು ಸಾಧಿಸಲು ಸಾಧ್ಯವಾಗಬೇಕಾದರೆ, ಮರಣಪೂರ್ವದ ಅವಧಿಯ ಈ ಲೌಕಿಕಬದುಕನ್ನು, ಬರಲಿರುವ ಆ ಮರಣಾನಂತರದ ಆ ನಾಳೆಯ ಶಾಶ್ವತ ಬದುಕಿಗಾಗಿ ಬೇಕಿರುವ ಅಗತ್ಯ ತಯಾರಿಗಳನ್ನು ನಡೆಸಲು ವಿನಿಯೋಗಿಸಿಕೊಳ್ಳಬೇಕು.

ನಾವು ಬದುಕುತ್ತಿರುವ ಈ ಪ್ರಸಕ್ತ ಜಗತ್ತಿನ ಉದಾಹರಣೆ ಒಂದು ಪರೀಕ್ಷಾ ಕೊಠಡಿಯಂತಿದೆ. ಪರೀಕ್ಷಾ ಕೊಠಡಿಯಲ್ಲಿ ಪರೀಕ್ಷೆ ನೀಡುವ ವಿದ್ಯಾರ್ಥಿಗೆ ಅತ್ಯಗತ್ಯವಿರುವ ವಸ್ತುಗಳಷ್ಟೇ ಸೀಮಿತ ಪ್ರಮಾಣದಲ್ಲಿ ದೊರಕುವ ವ್ಯವಸ್ಥೆಯನ್ನು ಮಾಡಲಾಗುತ್ತದೆಯೇ ಹೊರತು, ವಿದ್ಯಾರ್ಥಿಯ ಬಯಕೆಗಳನ್ನಾಗಲೀ, ಆತನ ಮನೋಕಾಮನೆಗಳನ್ನಾಗಲೀ ಪೂರೈಸುವ ಯಾವುದೇ ಸಲಕರಣೆಗಳಾಗಲೀ, ಸವಲತ್ತುಗಳಾಗಲೀ ಆತನಿಗಲ್ಲಿ ದೊರಕಲಾರದು. ಇನ್ನು, ಯಾವ ವಿದ್ಯಾರ್ಥಿಯು ಪರೀಕ್ಷಾ ಕೊಠಡಿಯನ್ನು ಕೇವಲ ಪರೀಕ್ಷಾ ಕೊಠಡಿ ಎಂದಷ್ಟೇ ಪರಿಗಣಿಸುತ್ತಾನೋ ಅವನು ಯಾವುದೇ ತೆರನಾದ ಹತಾಶೆಗಾಗಲೀ, ನಿರಾಶೆಗಾಗಲೀ ಒಳಗಾಗಲಾರ. ಮತ್ತಿನ್ನಾರಾದರೂ ವಿದ್ಯಾರ್ಥಿಯು, ಪರೀಕ್ಷಾ ಕೊಠಡಿಯನ್ನು ತನ್ನ ಮನೋಕಾಮನೆಗಳನ್ನು ಪೂರೈಸಿಕೊಳ್ಳುವ ಜಗತ್ತೆಂದು ಕಲ್ಪಿಸಿಕೊಂಡರೆ ಖಂಡಿತವಾಗಿಯೂ ಆತನ ಪಾಲಿಗೆ ಹತಾಶೆಯ ಹೊರತು ಬೇರೇನೂದಕ್ಕದು.

ನಮ್ಮೆಲ್ಲರ ಸೃಷ್ಟಿಕರ್ತನು ತನ್ನ ಸೃಷ್ಟಿ ಯೋಜನೆಯನ್ವಯ ಈ ಜಗತ್ತನ್ನು ನಮ್ಮ ಪಾಲಿನ ಪರೀಕ್ಷಾಗೃಹವನ್ನಾಗಿ ಮಾಡಿರುವನು. ಆದುದರಿಂದಲೇ ಆತನು ಭೂಮಿಯ ಮೇಲಿನ ಲೈಫ್ ಸಪೋರ್ಟಿಂಗ್ ಸಿಸ್ಟಮ್ ಅನ್ನು, ನಮ್ಮ ಈ ಪರೀಕ್ಷಾವಧಿಯಲ್ಲಿ ನಮ್ಮ ಮೂಲಭೂತ ಆವಶ್ಯಕತೆಗಳನ್ನು ಪೂರ್ತೀಕರಿಸುವಷ್ಟರ ಮಟ್ಟಿಗೆ ಮಾತ್ರ ಸೀಮಿತ ಪ್ರಮಾಣದಲ್ಲಿ ಇರಿಸಿರುವನು. ಇನ್ನು, ಯಾವುದೇ ವ್ಯಕ್ತಿ ಈ ಲೌಕಿಕ ಜೀವನವನ್ನು ತನ್ನ ಪಾಲಿನ ಪರೀಕ್ಷಾ ಮೈದಾನವೆಂಬ (Testing ground) ವಾಸ್ತವವನ್ನರಿತುಕೊಂಡು ಜೀವಿಸಿದಲ್ಲಿ ಆತನಿಗೆಂದೂ ಹತಾಶ ಮನೋಭಾವ ಕಾಡಲಾರದು. ಮತ್ತಿನ್ನಾರಾದರೂ, ಈ ಲೌಕಿಕ ಜಗತ್ತನ್ನು ತಮ್ಮ ಪಾಲಿನ ಮನೋಕಾಮನೆಗಳನ್ನು ಈಡೇರಿಸಿಕೊಂಡು ಜೀವಿಸುವ ತಾಣವೆಂದು ಭಾವಿಸಿಕೊಂಡರೆ,

ಖಂಡಿತವಾಗಿಯೂ ಅಂತಹವರು ತೀರಾ ಹತಾಶಾ ಮನೋಭಾವಕ್ಕೊಳಗಾಗುವರು. ಏಕೆಂದರೆ, ಈ ನಶ್ವರ ಜಗತ್ತಿನಲ್ಲಿ ಯಾವ ರೀತಿಯ ಶಾಶ್ವತ ವ್ಯವಸ್ಥೆಯನ್ನು ಅವರು ಬಯಸುತ್ತಿರುವರೋ, ಅದು ಅವರಿಗೆಂದೂ ಇಲ್ಲಿ ದೊರಕಲು ಸಾಧ್ಯವಿಲ್ಲ. ಸೃಷ್ಟಿಕರ್ತನ ಯೋಜನೆಯನ್ವಯ ಆ ರೀತಿಯ ಜೀವನ ಈ ಜಗತ್ತಿನಲ್ಲೆಂದೂ ಸಾಧ್ಯವಿಲ್ಲ.

ಈ ಭೂಮಿಯ ಮೇಲೆ ಹುಟ್ಟಿದ್ದೇ ಮೋಜು ಮಾಡಲು ಎಂದು ಭ್ರಮಿಸಿಕೊಂಡು ಜೀವಿಸುವ ಬದಲು, ಇದು ತನ್ನ ಪಾಲಿನ ಪರೀಕ್ಷಾ ಗೃಹವೆಂದುಕೊಂಡು ಜೀವಿಸುವುದೇ ಸೃಷ್ಟಿಕರ್ತನು ನಮ್ಮಿಂದ ಬಯಸುವ ಸರಿಯಾದ ಜೀವನಕ್ರಮವಾಗಿದೆ. ಅಂತಹ ವ್ಯಕ್ತಿಯು ತನ್ನ ಸೃಷ್ಟಿಕರ್ತನ ನಿಯಮಕ್ಕನುಗುಣವಾಗಿ ಜೀವನಕ್ರಮವನ್ನು ಅನುಸರಿಸಿದುದುರ ಪರಿಣಾಮವಾಗಿ, ಅವನ ಸೃಷ್ಟಿಕರ್ತನ ಕಡೆಯಿಂದ ಪಾರಿತೋಷಕದ ರೂಪದಲ್ಲಿ ಶಾಶ್ವತ ಯಶಸ್ಸನ್ನು ತನ್ನದಾಗಿಸಿಕೊಳ್ಳುವನು.

ಈ ಭೂಮಿಯ ಮೇಲೆ ಹುಟ್ಟಿದ್ದೇ ಮೋಜು ಮಾಡಲು ಎಂದು ಭ್ರಮಿಸಿಕೊಂಡು ಜೀವಿಸುವಾತನ ಜೀವನ ಶೈಲಿಗೂ, ಇಹಲೋಕದ ಜೀವನ ತನ್ನ ಪಾಲಿನ ಪರೀಕ್ಷಾ ಗೃಹವೆಂದುಕೊಂಡು ಜೀವಿಸುವುವವನ ಜೀವನಶೈಲಿಗೂ ಅಜಗಜಾಂತರ ವ್ಯತ್ಯಾಸವಿದೆ. ಇದನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸುಲಭವಾಗಲೆಂದು ಈ ಕೆಳಗೆ ನಾವು ಒಂದಿಷ್ಟು ಉದಾಹರಣೆಗಳನ್ನು ನೀಡುತ್ತಿದ್ದೇವೆ. ಅದನ್ನು ಗಮನಿಸಿದಲ್ಲಿ ಇಬ್ಬರ ನಡುವಿನ ಪ್ರಮುಖ ವ್ಯತ್ಯಾಸಗಳನ್ನು ಸುಲಭವಾಗಿ ಗುರುತಿಸಲು ನಮಗೆ ಸಾಧ್ಯವಾದೀತು.

ಈ ಈರ್ವ ವ್ಯಕ್ತಿಗಳ ನಡುವಿನ ಪ್ರಮುಖ ವ್ಯತ್ಯಾಸ ಬದುಕಿನ ಕುರಿತು ಅವರು ಹೊಂದಿರುವ ಚಿಂತನಾ ಶೈಲಿಯದ್ದಾಗಿದೆ. ದೇವವಿಧಿಗೆ ಬದ್ಧವಾಗಿ ಜೀವನಶೈಲಿಯನ್ನು ರೂಪಿಸಿಕೊಂಡ ವ್ಯಕ್ತಿಯ ಪ್ರತಿಯೊಂದು ಚಿಂತನಾಶೈಲಿಯು ಅವನ ಸೃಷ್ಟಿಕರ್ತ ಪ್ರಭುವಿನ ಇಚ್ಛೆಗನುಗುಣವಾಗಿ ಇರುವುದು. ಇದನ್ನೇ ನಾವು ಆಂಗ್ಲ ಭಾಷೆಯಲ್ಲಿ 'ಕ್ರಿಯೆಟರ್ ಓರಿಯೆಂಟೆಡ್ ಥಿಂಕಿಂಗ್' (Creator Oriented Thinking) ಎನ್ನಬಹುದು. 'ಕ್ರಿಯೆಟರ್ ಓರಿಯೆಂಟೆಡ್ ಥಿಂಕಿಂಗ್' ಮೈಗೂಡಿಸಿಕೊಂಡ ವ್ಯಕ್ತಿಯು, ಪ್ರತಿಯೊಂದು ವಿಷಯದಲ್ಲೂ ದೇವ ಸಂಪ್ರೀತಿಯನ್ನು ಬಯಸುತ್ತಾ, 'ತಾನು ಏನು ಮಾಡಬೇಕು? ಏನು ಮಾಡಬಾರದು?' ಎಂಬುದರ ಕುರಿತು ಬಹಳ ಜಾಗರೂಕನಾಗಿ ಹೆಜ್ಜೆ ಇಡುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಮೋಜಿನ ಜೀವನ ಶೈಲಿಯನ್ನು

ತನ್ನದಾಗಿಸಿಕೊಂಡವನು, ಸ್ವೇಚ್ಛಾ ಪ್ರವೃತ್ತಿಯುಳ್ಳವನಾಗಿರುತ್ತಾನೆ (Self Oriented Thinking). ಅಂತಹವರು ತಮ್ಮ ಮನಸ್ಸಿಗೆ ಬಂದಂತೆ ವರ್ತಿಸುತ್ತಾರೆ. ಅಂತಹವರಲ್ಲಿ, 'ತನ್ನನ್ನು ಸೃಷ್ಟಿಸಿದಾತನೊಬ್ಬನಿದ್ದಾನೆ. ತನ್ನ ಕರ್ಮಗಳ ಕುರಿತು ಅವನ ಬಳಿ ಉತ್ತರಿಸಬೇಕಾದೀತು' ಎಂಬ ಉತ್ತರದಾಯಿತ್ವದ ಯಾವುದೇ ಪ್ರಜ್ಞೆಯನ್ನು ನಮಗೆ ಕಾಣಲು ಸಾಧ್ಯವಿಲ್ಲ.

ಈ ಜೀವನವನ್ನು ತನ್ನ ಪಾಲಿನ ಪರೀಕ್ಷೆ ಎಂದು ತಿಳಿದ ವ್ಯಕ್ತಿಯು, ತನ್ನ ಮರಣಾನಂತರದ ಜೀವನದ ಕುರಿತು ಹೆಚ್ಚು ಚಿಂತಿತನಾಗಿರುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಮೋಜಿನ ಜೀವನ ಶೈಲಿ ತನ್ನದಾಗಿಸಿಕೊಂಡ ವ್ಯಕ್ತಿಗೆ, ಕೇವಲ " 'ಇಂದು' ಹೇಗೆ ಚೆಂದವಾಗಿಸುವುದು" ಎಂಬುದರ ಕುರಿತೇ ಹೆಚ್ಚು ಚಿಂತೆಯಿರುತ್ತದೆ. ಉದಾ: ಮರಣಾ ನಂತರದ ಬದುಕಿನ ತಯಾರಿಯಲ್ಲಿ ತೊಡಗಿದ ವ್ಯಕ್ತಿಯು, 'ಪಾಲಿಗೆ ಬಂದದ್ದೇ ಪಂಚಾಮೃತ' ಎನ್ನುವ ಹಾಗೆ ತೃಪ್ತಿಕರ ಜೀವನವನ್ನು ತನ್ನದಾಗಿಸಿಕೊಳ್ಳುತ್ತಾನೆ. ಆತ ತನ್ನ ಪಾಲಿಗೆ ಬಂದುದರಲ್ಲೇ ತೃಪ್ತನಾಗುತ್ತಾ, ತನ್ನ ಆವಶ್ಯಕತೆಗನುಗುಣವಾಗಿ ಖರ್ಚು ಮಾಡುತ್ತಾ ಸಂತೃಪ್ತ ಜೀವನ ಶೈಲಿಯನ್ನು ತನ್ನದಾಗಿಸಿಕೊಳ್ಳುತ್ತಾನೆ. ಇದಕ್ಕೆ ತದ್ವಿರುದ್ಧವಾಗಿ ಮೋಜಿನ ಜೀವನಶೈಲಿಯನ್ನು ತನ್ನದಾಗಿಸಿಕೊಂಡಿರುವ ವ್ಯಕ್ತಿಯು ಹೆಚ್ಚೆಚ್ಚು ಸಂಪತ್ತನ್ನು ಸಂಗ್ರಹಿಸುವುದರ ಕುರಿತು ಹಗಲಿರುಳು ಚಿಂತಿಸುತ್ತಿರುತ್ತಾನೆ. ತನ್ನ ಆಸೆಗೆ ಕಡಿವಾಣ ಹಾಕಲಾಗದ, ಎಷ್ಟು ತಿಂದರೂ ಹೊಟ್ಟೆ ತುಂಬದಂತಿರುವ ದುರಾಸೆಯ ಪ್ರವೃತ್ತಿಯುಳ್ಳ ವ್ಯಕ್ತಿಯು ಅವನಾಗಿರುತ್ತಾನೆ.

ಉದಾ: ಜೀವನವನ್ನು ತನ್ನ ಪಾಲಿನ ಪರೀಕ್ಷೆ ಎಂದು ತಿಳಿದುಕೊಂಡ ವ್ಯಕ್ತಿಯ ಬಳಿ ಒಂದು ಸಾಮಾನ್ಯವಾದ ಸಣ್ಣ ಕಾರಿದೆ ಎಂದು ತಿಳಿದುಕೊಳ್ಳಿ. ಯಾರಾದರೂ ಆತನ ಬಳಿ ಬಂದು, 'ಇದಕ್ಕಿಂತ ಉತ್ತಮವೂ, ವಿಶಾಲವೂ ಆದ ದೊಡ್ಡ ಕಾರನ್ನು ನೀನು ಖರೀದಿಸಬಾರದೇಕೆ?' ಎಂದು ಸಲಹೆಯಿತ್ತರೆ, ಆತ ಅದಕ್ಕೆ ಪ್ರತ್ಯುತ್ತರವಾಗಿ, 'ಈ ಕಾರು ನನ್ನ ಆವಶ್ಯಕತೆಯನ್ನು ಪೂರೈಸುತ್ತಿದೆ. ನನ್ನ ಆವಶ್ಯಕತೆಗೂ ಮಿಗಿಲಾದ ಕಾರನ್ನು ಖರೀದಿಸಿ, ದೇವನ ಬಳಿ ಲೆಕ್ಕವನ್ನರ್ಪಿಸುವ ದಿನ ನನ್ನ ಹೊರೆಯನ್ನು ನಾನು ಹೆಚ್ಚಿಸಿಕೊಳ್ಳಲು ಬಯಸಲಾರೆ' ಎಂದು ಹೇಳುವನು. ಇದಕ್ಕೆ ವ್ಯತಿರಿಕ್ತವಾಗಿ ಮೋಜಿನ ಜೀವನ ಶೈಲಿಯನ್ನು ತನ್ನದಾಗಿಸಿಕೊಂಡವನು, ಕೇವಲ ಒಂದು ವಿಶಾಲವಾದ ಕಾರಲ್ಲ, ಬದಲಿಗೆ 'ಅನೇಕ ಐಷಾರಾಮಿ ಕಾರುಗಳ ಭಂಡಾರವೇ ನನ್ನ ಬಳಿ ಇರಬೇಕು' ಎಂದೇ ಬಯಸುತ್ತಾನೆ.

ಪರೀಕ್ಷಾಮನೋಭಾವದ ವ್ಯಕ್ತಿಯು ನಿರುಪಯುಕ್ತ ವಿಷಯಗಳಿಂದ ತನ್ನನ್ನು ತಾನು ದೂರವಿರಿಸಿಕೊಳ್ಳುತ್ತಾನೆ. ಅವುಗಳನ್ನಾತನು ತನ್ನ ಗಮನವನ್ನು ಬೇರೆಡೆಗೆ ಸೆಳೆದು, ತನ್ನನ್ನು ದಾರಿ ತಪ್ಪಿಸಬಹುದೆಂದು ಹೆದರುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಮೋಜಿನ ಜೀವನಶೈಲಿಯನ್ನು ಅನುಸರಿಸುವಾತನು, ತನ್ನ ಮನರಂಜನೆ ಮತ್ತು ಮೋಜಿಗಾಗಿ ತನ್ನ ಹಣ ಸಮಯ ಎರಡನ್ನೂ ಯಥೇಚ್ಛವಾಗಿ ಪೋಲು ಮಾಡುತ್ತಾನೆ.

ಪರೀಕ್ಷಾ ಮನೋಭಾವದ ವ್ಯಕ್ತಿಯು ಪ್ರತಿಯೊಂದು ವಿಷಯದಲ್ಲೂ ಮಿತಿ ತಪ್ಪದಂತೆ ಜಾಗೂರಕನಾಗಿರುತ್ತಾನೆ. ಉದಾ: ಆತನು ಖರ್ಚು ವೆಚ್ಚದಲ್ಲಿ ದುಂದುಗಾರಿಕೆ ಮಾಡುವುದಿಲ್ಲ. ಅವನಾಡುವ ಮಾತೂ ಮಿತಿ ದಾಟುವುದಿಲ್ಲ. ಅಷ್ಟೇ ಏಕೆ?, ಆತ ನೀರನ್ನೂ ತನ್ನ ಆವಶ್ಯಕತೆಗಿಂತ ಹೆಚ್ಚು ಬಳಸುವುದಿಲ್ಲ. ಒಟ್ಟಾರೆ (Waste) ನಾವು ಆಂಗ್ಲ ಭಾಷೆಯಲ್ಲಿ ವೇಸ್ಟ್ ಎಂದು ಏನನ್ನೆಲ್ಲಾ ಕರೆಯುತ್ತೇವೆಯೋ ಅಂತಹ ಎಲ್ಲ ಅಪ್ರಯೋಜನಕಾರಿ ವಿಷಯಗಳಿಂದ ಆತ ತನ್ನನ್ನು ತಾನು ದೂರವಿರಿಸಿಕೊಳ್ಳುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಮೋಜಿನ ಮನೋಭಾವದ ವ್ಯಕ್ತಿಯು 'ದುಂದುವೆಚ್ಚ' ಎಂದರೆ ಏನೆಂದು ತಿಳಿಯದ ಮೂಢನಂತೆ ವರ್ತಿಸುತ್ತಾನೆ. ಪರೀಕ್ಷಾ ಮನೋಭಾವದ ವ್ಯಕ್ತಿಯು ಎಲ್ಲಾ ವಿಷಯಗಳಲ್ಲೂ ನೈತಿಕ ಮೌಲ್ಯಗಳಿಗೆ ಬದ್ಧನಾಗಿ ವ್ಯವಹರಿಸುತ್ತಾನೆ. ಇದಕ್ಕೆ ವ್ಯತಿರಿಕ್ತವಾಗಿ ಮೋಜಿನ ಮನೋಭಾವದ ವ್ಯಕ್ತಿಯ ದೃಷ್ಟಿಯಲ್ಲಿ ಆತನ ಸ್ವ-ಹಿತಾಸಕ್ತಿಗಷ್ಟೇ ಪ್ರಾಮುಖ್ಯತೆ. ಅವನ ಬಳಿ ಯಾವ ನೈತಿಕ ಮಾನದಂಡಗಳಿಗೂ ಕವಡೆ ಕಿಮ್ಮತ್ತು ಸಿಗದು.

ದೇವನ ಸೃಷ್ಟಿಯ ಯೋಜನೆಯನ್ವಯ ವಿವಿಧ ಸ್ಥಿತಿ-ಗತಿಗಳನ್ನು ಎದುರಿಸಿ ಬೆಳೆಯುವ ವ್ಯಕ್ತಿಯೋರ್ವನಲ್ಲಿ ಯಾವ ರೀತಿಯ ವ್ಯಕ್ತಿತ್ವ ನಿರ್ಮಾಣವಾಗುತ್ತಿದೆ ಎಂಬುದನ್ನು ನಾವು ಮೊದಲು ಅರಿಯುವ ಪ್ರಯತ್ನ ಮಾಡಬೇಕು. ಆತನಲ್ಲಿ ಸಜ್ಜನಿಕೆಯುಳ್ಳ ವ್ಯಕ್ತಿತ್ವ ನಿರ್ಮಾಣವಾಗಲು ಏನು ಮಾಡಬೇಕು? ದುರ್ಜನರಂತಾಗದಂತೆ ತಡೆಯಲು ಏನನ್ನು ಮಾಡಬೇಕು ಎಂಬುದಿಲ್ಲಿ ಬಹಳ ಮುಖ್ಯವಾದ ವಿಷಯ. ಮನುಷ್ಯನ ಉತ್ತಮ ದೈಹಿಕ ಆರೋಗ್ಯಕ್ಕಾಗಿ, ಆತನ ಭೌತಿಕ ಅಸ್ತಿತ್ವಕ್ಕಾಗಿ ಆಹಾರ-ಪದಾರ್ಥಗಳು ಎಷ್ಟು ಮುಖ್ಯವೋ, ಅದೇ ರೀತಿ ಆತನ ಉತ್ತಮ ಮಾನಸಿಕ ಆರೋಗ್ಯಕ್ಕಾಗಿ, ಆತನ ಆಧ್ಯಾತ್ಮಿಕ ಅಸ್ತಿತ್ವಕ್ಕಾಗಿ ನಿರಂತರ ಆಧ್ಯಾತ್ಮಿಕ ಆಹಾರ (Spiritual Food) ದೊರೆಯುತ್ತಿರಬೇಕಾದುದೂ ಕೂಡ ಅಷ್ಟೇ ಮುಖ್ಯ.

ವ್ಯಕ್ತಿಯೋರ್ವನಿಗೆ ದೊರೆಯುವ ಆಧ್ಯಾತ್ಮಿಕ ಆಹಾರವು ಅವನೊಳಗಿನ ಆಂತರಿಕ ವ್ಯಕ್ತಿತ್ವ ರೂಪಿಸುವಲ್ಲಿ, ಅವನನ್ನೊಬ್ಬ ಸಜ್ಜನ ವ್ಯಕ್ತಿಯನ್ನಾಗಿ ಮಾಡುವಲ್ಲಿ ಬಹಳ ಪ್ರಮುಖ ಪಾತ್ರ ವಹಿಸುವುದು.

ಹಾಗಾದರೆ, ನಮ್ಮ ವ್ಯಕ್ತಿತ್ವ ರೂಪಿಸಬಲ್ಲ ಆ ಆಧ್ಯಾತ್ಮಿಕ ಆಹಾರ ಯಾವುದು?, ಆಧ್ಯಾತ್ಮಿಕ ಆಹಾರಕ್ಕೆ ಇರುವ ಇನ್ನೊಂದು ಹೆಸರೇ ಸತ್ಯ. ವ್ಯಕ್ತಿಯೋರ್ವನ ಮುಂದೆ ಸತ್ಯವು ಬಂದಾಗ, ಯಾವುದೇ ಪಕ್ಷಪಾತವಿಲ್ಲದೇ ಅದನ್ನು ಸ್ವೀಕರಿಸುವುದು ಆಧ್ಯಾತ್ಮಿಕ ಆಹಾರವನ್ನು ಸ್ವಾಗತಿಸುವ ಕ್ರಮವಾಗಿದೆ. ಇಂತಹ ಸಂದರ್ಭದಲ್ಲಿ ಪರಿಸ್ಥಿತಿಯ ಪ್ರಭಾವಕ್ಕೊಳಗಾಗಿ ನಿರ್ಧಾರ ತಳೆಯಕೂಡದು. ಸಮಾಜ, ಪರಿಸ್ಥಿತಿಗಳ ಪ್ರಭಾವವನ್ನೂ ಮೀರಿ ಸರಿಯಾದ ನಿರ್ಧಾರವನ್ನು ತಾಳಲು, ಸತ್ಯವನ್ನು ಸ್ವೀಕರಿಸಲು ಆ ವ್ಯಕ್ತಿಗೆ ಸಾಧ್ಯವಾಗಬೇಕು. ಸತ್ಯವನ್ನು ಸ್ವೀಕರಿಸುವ ವ್ಯಕ್ತಿಯೊಳಗೆ ಕೃತಜ್ಞತೆ ಹಾಗೂ ಸ್ವೀಕಾರ ಮನೋಭಾವವಿರಬೇಕು. ಕೃತಘ್ನತೆ ಮತ್ತು ತಿರಸ್ಕಾರದ ಮನೋಭಾವವಿರುವ ವ್ಯಕ್ತಿ ಎಂದಿಗೂ ಸತ್ಯವನ್ನು ಸ್ವೀಕರಿಸಲು ಅರ್ಹನೆನಿಸನು. ಸತ್ಯವನ್ನು ಸ್ವೀಕರಿಸಲು ಆತನು ಅರ್ಹನೆನಿಸಬೇಕಾದರೆ, ತನಗೆ ಋಣಾತ್ಮಕ ಅನುಭವವಾದಾಗಲೂ ಅದಕ್ಕಾತ ಧನಾತ್ಮಕವಾಗಿ ಪ್ರತಿಕ್ರಿಯಿಸಬೇಕು. ತನಗೆ ದೊರೆತ ಸ್ವಾತಂತ್ರ್ಯವನ್ನು ಸ್ವ–ನಿರ್ಮಿತ ಶಿಸ್ತಿನ ಪರಿಧಿಯೊಳಗೆ ಅವನು ಸದುಪಯೋಗಪಡಿಸಿಕೊಳ್ಳಬೇಕು. ಅವನು ಸದಾ ನ್ಯಾಯದ ಧ್ವಜವಾಹಕನಾಗಿರಬೇಕು, ಸ್ವತಃ ತಾನು ತಪ್ಪು ಮಾಡಿದಾಗಲೂ ತನ್ನ ತಪ್ಪನ್ನು ಸಮರ್ಥಿಸಿಕೊಳ್ಳುವ ಬದಲು ತನ್ನ ತಪ್ಪನ್ನು ತಿದ್ದಿಕೊಂಡು ನಡೆಯುವನು ಅವನಾಗಿರಬೇಕು. ಅವನು ಈ ಲೌಕಿಕ ಜಗತ್ತಿನ ನಶ್ವರ ಹಿತಕ್ಕಿಂತ, ಪಾರಲೌಕಿಕ ಶಾಶ್ವತ ಜೀವನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುವವನಾಗಿರಬೇಕು. ಪಾರಲೌಕಿಕ ಯಶಸ್ಸಿಗಾಗಿ ಅವನು ಹಗಲಿರುಳು ದುಡಿಯುವವನಾಗಿರಬೇಕು. ಕೇವಲ ಐಷಾರಾಮಿ ಜೀವನಶೈಲಿಯನ್ನು ತನ್ನದಾಗಿಸಿಕೊಳ್ಳಲಿಕ್ಕಾಗಿ ಈ ಲೌಕಿಕ ಜಗತ್ತಿನ ಹಿಂದೆ ಓಡುವಾತ ಆತನಾಗಿರಕೂಡದು.

ಯಾರು ಈ ಲೌಕಿಕ ಜೀವನವನ್ನು ತಮ್ಮ ಪಾಲಿನ ಪರೀಕ್ಷಾ ಮೈದಾನವೆಂದು ಭಾವಿಸಿಕೊಂಡು ಅದಕ್ಕನುಗುಣವಾದ ಜೀವನ ಶೈಲಿಯನ್ನು ತಮ್ಮದಾಗಿಸಿಕೊಂಡು ಜೀವಿಸುತ್ತಾರೋ ಅಂತಹವರು ಸೃಷ್ಟಿಕರ್ತ ಪ್ರಭುವಿನ ಸಾಮೀಪ್ಯವನ್ನು ಪಡೆಯುವ, ಶಾಶ್ವತ ಸ್ವರ್ಗೋದ್ಯಾನದ ನಿವಾಸಿಗಳಾಗುವ ಸೌಭಾಗ್ಯವನ್ನು ಪಡೆಯುವರು. ಇದಕ್ಕೆ ತದ್ವಿರುದ್ಧವಾಗಿ ಜೀವನವಿರುವುದೇ ಮೋಜಿಗಾಗಿ ಎಂದು ಭ್ರಮಿಸಿಕೊಂಡು ತಮ್ಮ ಸ್ವೇಚ್ಛೆಯಂತೆ ಜೀವಿಸುವವರು ಪರಲೋಕದಲ್ಲಿ ಭೀಕರ ಪರಿಣಾಮವನ್ನು ಎದುರಿಸುವರು. ಅವರಲ್ಲಿ ಶಾಶ್ವತ ಸುಖಜೀವನದಿಂದ ವಂಚಿತರಾಗುವುದಲ್ಲದೇ ಭೀಕರ ಶಿಕ್ಷೆಗೂ ಗುರಿಯಾಗುವರು. ಕೇವಲ ವಿಷಾದ ಪಡುವ ಹೊರತು ಬೇರಾವ ದಾರಿಯೂ ಅಲ್ಲಿ ಅವರಿಗಾಗಿ ತೆರೆಯದು.

*************

# ಜೀವನದ ಉದ್ದೇಶ

ಮಾರ್ಚ್ 11, 2006ರ ಸಂಜೆ ನಾನು ಹೈದರಾಬಾದ್ ನಿಂದ ದೆಹಲಿಗೆ ವಿಮಾನದಲ್ಲಿ ಹೊರಟಿದ್ದೆ. ನನ್ನೊಂದಿಗೆ CPS ತಂಡದ ಇತರ ಅನೇಕ ಸಂಗಾತಿಗಳೂ ಜೊತೆಯಲ್ಲಿ ಪಯಣಿಸುತ್ತಿದ್ದರು. ಅವರೆಲ್ಲರೂ ತಮ್ಮ ಸಹಪ್ರಯಾಣಿಕರ ಬಳಿ ಕಿರುಪತ್ರಗಳನ್ನು ಹಂಚುತ್ತಾ, ಸಂದೇಶ ಪ್ರಚಾರದ ಕಾರ್ಯದಲ್ಲಿ ತೊಡಗಿದ್ದರು. ಇತರ ಸಹಪ್ರಯಾಣಿಕರ ಪೈಕಿ ನೇಹಾ ಬಟ್ವಾರಾ ಎಂಬ ಮಹಿಳೆಯೂ ಇದ್ದರು. ಅವರ ಬಳಿಯೂ ನಮ್ಮ ತಂಡದ ಸದಸ್ಯರು ಕುಶಲೋಪರಿ ನಡೆಸುತ್ತಾ, ದೇವಸಂದೇಶದ ಕಿರುಪತ್ರವನ್ನು ಅವರ ಕೈಗಿತ್ತರು. ಆ ಮಹಿಳೆ ದೆಹಲಿ ವಿಮಾನ ನಿಲ್ದಾಣದಲ್ಲಿಳಿದು, ತನ್ನೂರಿಗೆ ಪಯಣಿಸಿದರು. ಇದಾದ ಸ್ವಲ್ಪ ದಿವಸದ ಬಳಿಕ, ಮಾರ್ಚ್ 28 ರಂದು ಆಕೆಯ ಪತ್ರವೊಂದು ಈ–ಮೇಲ್ ಮುಖಾಂತರ ನನಗೆ ತಲುಪಿತು. ಆ ಪತ್ರದಲ್ಲಿ ಕೆಳಕಂಡಂತೆ ಬರೆಯಲಾಗಿತ್ತು:

Respected Moulana Waheeduddin Khan,

I am Neha, working in an MNC for some people, it cannot be better than to get a job in top MNC just after graduation. But believe me, I am in search of a more purposeful life. That's's why I am writing to you.

I met Khalid Ansari and Sadia Khan on a flight to Delhi and could apparently see the difference your guidance has made to their lives. Moulana, I know we have been created by God, and we all have a purpose here to fulfil on earth, which if done, will be more satisfying than getting heaven after death.

The point where im lacking is to know the purpose for which I have been sent here. I could not come to your class in Delhi, because my family was against to going Spiritual Classes. You understand.

I will be greatful to you for the whole of my life if you could help me in any way. I am currently in Hyderabad.

Regards,

Neha Batwaara, Software Engg. MIEL Hyderabad. Ext 3355, Tel. 040 203308090

ಮೇಲ್ನೋಟಕ್ಕೆ ಇದು ಕೇವಲ ಮಹಿಳೆಯೋರ್ವರ ಪತ್ರದಂತೆ ಕಂಡುಬಂದರೂ, ನಿಜವಾಗಿ ಇದು ಎಲ್ಲ ಜನರ ಅಂತರಾಳದ ಕರೆಯಾಗಿದೆ. ಈ ಪತ್ರವು ಪ್ರತಿಯೋರ್ವ ಸ್ತ್ರೀ–ಪುರುಷನ ಮನದಾಳದ ಅನುವಾದವಾಗಿದೆ. ಆಧುನಿಕ ಜಗತ್ತಿನ ಪ್ರತಿಯೋರ್ವ ವ್ಯಕ್ತಿಯೂ ತನ್ನ ಜೀವನದ ನೈಜ ಉದ್ದೇಶವೇನು? (Purposeful Life) ಎಂಬ ಹುಡುಕಾಟದಲ್ಲಿರುವನು. ಇದು ಪ್ರತಿಯೋರ್ವ ವ್ಯಕ್ತಿಯೊಳಗಿನ ಪ್ರಕೃತಿಯ ಕರೆಯಾಗಿದೆ. ಆದರೆ, ಜನರು ತಮ್ಮ ಜೀವನದ ಉದ್ದೇಶವನ್ನು ಈ ಲೌಕಿಕ ಬದುಕಿಗಷ್ಟೇ ಸೀಮಿತವಾಗಿರಿಸುತ್ತಾರೆ. ಮರಣಾನಂತರದ ಬದುಕಿನ ಕುರಿತು ಅವರಿಗೆ ಯಾವುದೇ ಪ್ರಜ್ಞೆಯಾಗಲೀ, ಜ್ಞಾನವಾಗಲೀ ಇಲ್ಲ. ಅಷ್ಟುದ್ದ ಕಾಯಲೂ ಅವರು ಸಿದ್ಧರಿಲ್ಲ. ನಿಜಕ್ಕೂ ಇದು ಮಾನವ ಬದುಕಿನ ವಿಪರ್ಯಾಸ.

ಮನುಷ್ಯನು ಶಿಸ್ತುಬದ್ಧ ಹಾಗೂ ಉದ್ದೇಶಪೂರ್ಣ ಜೀವನವನ್ನು ಯಾರ ಮಾರ್ಗದರ್ಶನದಲ್ಲಿ ನಡೆಸಬಯಸುತ್ತಾನೆ ಎಂಬುದಿಲ್ಲಿ ಅತ್ಯಂತ ಹೆಚ್ಚು ಪ್ರಶಸ್ತ. ಅವನು ಜೀವಿಸಲು ಉದ್ದೇಶಿಸಿರುವ ಈ ನಿಯಮಬದ್ಧ ಜೀವನ ತಾನೇ ನಿರ್ಮಿಸಿಕೊಂಡ ತನ್ನ ಜಗತ್ತಿನಲ್ಲಿ ತನ್ನದೇ ಸ್ವ–ನಿರ್ಮಿತ ನಿಯಮಗಳಡಿಯಲ್ಲೇ ಅಥವಾ ದೇವನಿರ್ಮಿತ ಜಗತ್ತಿನಲ್ಲಿ ದೇವನಿಯಮದ ಪ್ರಕಾಶದಡಿಯಲ್ಲೇ?. ತನ್ನ ಸ್ವ–ನಿರ್ಮಿತ ಜಗತ್ತಿನಲ್ಲಿ ಇಂತಹದ್ದೊಂದು ಶಿಸ್ತುಬದ್ಧ, ನಿಯಮಬದ್ಧ ಜೀವನವನ್ನು ನಡೆಸುವುದು ಖಂಡಿತಾ ಮನುಷ್ಯನಿಗದು ಸಾಧ್ಯವಿಲ್ಲದ ಮಾತು. ದೇವನಿರ್ಮಿತ ಜಗತ್ತಿನಲ್ಲಿ ದೇವಮಾರ್ಗದರ್ಶನದಡಿಯಲ್ಲಿ ಮಾತ್ರ ಇಂತಹದ್ದೊಂದು ಸದುದ್ದೇಶದ ಜೀವನ (Purposeful Life) ನಡೆಸಲು ಅವನಿಗೆ ಸಾಧ್ಯ.

ವಾಸ್ತವ ಹೀಗಿರುವಾಗ, ದೇವನ ಮಾರ್ಗದರ್ಶನ ಯಾವುದು? ದೇವನು ನಿರ್ಮಿಸಿದ ಕಾನೂನುಗಳು ಯಾವುವು?, ನಾವು ಜೀವಿಸುತ್ತಿರುವ ಈ ನಿಸರ್ಗದ ಸೃಷ್ಟಿಯ ಹಿಂದಿನ ಅವನ ಉದ್ದೇಶವೇನು? ಎಂಬುದನ್ನು ಮೊತ್ತ ಮೊದಲು ಮನುಷ್ಯನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಏಕೆಂದರೆ, ಇವೆಲ್ಲವನ್ನೂ ಅರಿಯದ ಹೊರತು, ತನ್ನ ಜೀವನದ ಉದ್ದೇಶಿತ ಗುರಿ ಮುಟ್ಟಲು ಆತನಿಗೆ ಸಾಧ್ಯವಿಲ್ಲ.

ನಿಮ್ಮ ಬಳಿ ಕಾರೊಂದಿದೆ. ಅದರಲ್ಲಿ ಕುಳಿತು ನೀವು ಪಯಾಣ ಮಾಡಲು ಬಯಸುತ್ತೀರೆಂದಾದರೆ ಮೊತ್ತ ಮೊದಲು, ನೀವು ವಾಸಿಸುತ್ತಿರುವ ನಿಮ್ಮ ದೇಶದಲ್ಲಿ ಎಡಬದಿ ಸಂಚಾರದ ನಿಯಮವಿದೆಯೋ, ಬಲಬದಿ ಸಂಚಾರದ ನಿಯಮವಿದೆಯೋ ಎಂಬುದನ್ನು ಅರಿತುಕೊಂಡಿರಬೇಕಾಗಿರುವುದು ಅತ್ಯಗತ್ಯ. ಒಂದು ವೇಳೆ ಎಡಬದಿ ಸಂಚಾರವಿರುವ ರಸ್ತೆಯಲ್ಲಿ ನೀವು ಬಲಬದಿಯಿಂದ ಕಾರನ್ನು ಚಲಾಯಿಸದಲ್ಲಿ ಅಥವಾ ಬಲಬದಿ ಸಂಚಾರವಿರುವ ದೇಶದಲ್ಲಿ ನೀವು ಎಡಬದಿಯಲ್ಲಿ ಕಾರನ್ನು ಚಲಿಸುತ್ತೀರೆಂದಾದರೆ ನೀವು ನಿಮ್ಮ ಕಾರಿನಲ್ಲಿ ಕುಳಿತು ನೀವು ತಲುಪಬೇಕೆಂದುಕೊಂಡಿರುವ ಜಾಗಕ್ಕೆ ಖಂಡಿತವಾಗಿಯೂ ತಲುಪಲಾರಿರಿ.

ಇದೇ ನಿಯಮ ನಮ್ಮ ಬದುಕೆಂಬ ಪಯಣಕ್ಕೂ ಅನ್ವಯಿಸುವುದು. ಮನುಷ್ಯನು ತನ್ನ ಬದುಕಿನ ಈ ಪಯಣವನ್ನು ಕೇವಲ ತಾನು ನಿರ್ಮಿಸಿಕೊಂಡಿರುವ ತನ್ನ ಭದ್ರಕೋಟೆಯೊಳಗೋ, ಅಥವಾ ತನ್ನ ಸ್ವಯಂ-ನಿರ್ಮಿತ ಜಗತ್ತಿನಲ್ಲಿ ಕಳೆಯುವುದು ಖಂಡಿತವಾಗಿಯೂ ಸಾಧ್ಯವಿಲ್ಲದ ಮಾತು. ಆದುದರಿಂದ ಈ ಜಗತ್ತಿನಲ್ಲಿರುವ ಪ್ರತಿಯೋರ್ವ ಸ್ತ್ರೀ-ಪುರುಷರೂ ದೇವನಿರ್ಮಿತ ಈ ಜಗತ್ತಿನ ಉದ್ದೇಶವನ್ನರಿಯಲು ಪ್ರಯತ್ನಿಸಿ, ದೇವನಿಯಮಕ್ಕನುಗುಣವಾಗಿ ತಮ್ಮ ಬದುಕನ್ನು ರೂಪಿಸಿಕೊಳ್ಳುವಲ್ಲಿ ಕಾರ್ಯೋನ್ಮುಖರಾಗಬೇಕು. ಒಂದು ವೇಳೆ, ದೇವನಿರ್ಮಿತ ಈ ಜಗತ್ತಿನ ಹಿಂದಿರುವ ಉದ್ದೇಶದ ಕುರಿತು, ತಮ್ಮ ಮರಣಾನಂತರದ ಬದುಕಿನ ಕುರಿತು ತಿಳಿದುಕೊಳ್ಳುವಲ್ಲಿ ಯಾರಾದರೂ ಅನಾಸಕ್ತಿ ತೋರಿದಲ್ಲಿ ಖಂಡಿತವಾಗಿಯೂ ಅವರು ಮುಂಬರುವ ಮಹಾನಷ್ಟದಿಂದ ತಮ್ಮನ್ನು ತಾವು ಪಾರು ಮಾಡಿಕೊಳ್ಳುವುದು ಅಸಾಧ್ಯದ ಮಾತು.

ಇದನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಮನುಷ್ಯನಿಗೆ ತನ್ನ ಸ್ವ-ಅನುಭವವೇ ಧಾರಾಳ ಸಾಕು. ಉದಾ: ವ್ಯಕ್ತಿಯೋರ್ವನಿಗೆ ಬಾಯಾರಿಕೆಯಾದಲ್ಲಿ ಅದನ್ನು ನೀಗಿಸಿಕೊಳ್ಳಲು ಆತನಿಗೆ ನೀರನ್ನು ಕುಡಿಯದೇ ಬೇರೆ ವಿಧಿಯಿಲ್ಲ. ಇದೇ ರೀತಿ, ಆತನಿಗೆ ಹಸಿವಾದಲ್ಲಿ, ಆತನು ಆಹಾರ ಸೇವಿಸುವುದೊಂದೇ ಹಸಿವೆ ನೀಗಿಸಿಕೊಳ್ಳಲಿರುವ ಪರಿಹಾರ. ಅದೇ ತೆರನಾಗಿ ಅವನು ಉಸಿರಾಡಲು, ಅವನು ಬದುಕಲು ಪ್ರಕೃತಿ ನೀಡಿರುವ ಆಮ್ಲಜನಕವನ್ನು ಅವನು ಸೇವಿಸಲೇಬೇಕು. ಇದು ನಿಸರ್ಗದ ನಿಯಮ. ಇದನ್ನು ಮೀರಿ ಬದುಕಲು ನಮಗೆ ಸಾಧ್ಯವಿಲ್ಲ.

ಇದೇ ರೀತಿ ಜೀವನದ ಉದ್ದೇಶಿತ ಗುರಿಯನ್ನು ನಾವು ತಲುಪಬೇಕೆಂದಾದಲ್ಲಿ, ಸೃಷ್ಟಿಯ ಹಿಂದಿರುವ ಸೃಷ್ಟಿಕರ್ತನ ಉದ್ದೇಶವೇನು? (Creation Plan) ಎಂಬುದನ್ನು ಅರಿಯುವುದು ಅತ್ಯಗತ್ಯ. ಈ ವಿಷಯದಲ್ಲಿ ಇದರ ಹೊರತಾಗಿ ಮನುಷ್ಯನಿಗೆ ಬೇರಾವ ಪರ್ಯಾಯ ಮಾರ್ಗವೂ ಇಲ್ಲ. 'ಕುರ್ ಆನ್' ನಿಸರ್ಗವನ್ನುಂಟು ಮಾಡಿದ ದೇವನ ವಚನವಾಗಿದೆ. ಈ ಮೇಲ್ಕಂಡ ಚರ್ಚಿತ ವಿಷಯದ ಕುರಿತು ಕುರ್ ಆನ್ ನ 103ನೆಯ ಅಧ್ಯಾಯದ ಸಾರಾಂಶ ಹೀಗಿದೆ:

History is witness that man is in loss, except those who follow the course of the Creator.

ದೇವನಿರ್ಮಿತ ಕಾನೂನಿನ ಪರಿಪಾಲನೆ ಮಾಡದವರು ಮಹಾನಷ್ಟಕ್ಕೆ ಈಡಾದರೆಂಬುದರ ಕುರಿತು ಇತಿಹಾಸವೇ ಸಾಕ್ಷಿ.

ಈ ದೃಷ್ಟಿಯಿಂದ ನೋಡಿದಲ್ಲಿ, ಸೃಷ್ಟಿಕರ್ತನು ಮಾನವನ ಜೀವನವನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದಾನೆ. ಮರಣಪೂರ್ವ ಜೀವನ. ಮರಣಾನಂತರದ ಜೀವನ. ಮರಣಪೂರ್ವ ಜೀವನ ಮರಣಾನಂತರದ ಜೀವನಕ್ಕೆ ಬೇಕಾದ ಸತ್ಕರ್ಮವನ್ನು ಮಾಡಲು ನೀಡಲ್ಪಟ್ಟ ಅವಧಿಯಾದರೆ, ಮರಣಾನಂತರದ ಜೀವನ ಮಾಡಲ್ಪಟ್ಟ ಕರ್ಮಕ್ಕನುಗುಣವಾಗಿ ಪ್ರತಿಫಲವನ್ನು ಅನುಭವಿಸುವ ಅವಧಿಯಾಗಿದೆ. ಮರಣಾನಂತರದ ಅವಧಿಯಲ್ಲಿ ಪಡೆಯಬೇಕಾದುದು ಮರಣದ ಮೊದಲು ದೊರೆಯದು. ಮರಣದ ಮೊದಲು ಮಾಡಬೇಕಾದುದನ್ನು ಮರಣದ ಮೊದಲೇ ಮಾಡಿಮುಗಿಸಬೇಕು. ಮರಣದ ಬಳಿಕ ತಮ್ಮನ್ನು ತಾವು ಸಾಬೀತು ಪಡಿಸಲು ಯಾವುದೇ ತೆರನಾದ ಇನ್ನೊಂದು ಅವಕಾಶ ಸಿಗದು.

ಮನುಷ್ಯ ಜೀವನದ ಕುರಿತು ಅಧ್ಯಯನ ನಡೆಸಿದಲ್ಲಿ, ಅವನು ಪ್ರಕೃತಿದತ್ತವಾಗಿ ಅನಿಯಮಿತ ಆಸೆ–ಆಕಾಂಕ್ಷೆಗಳ (Unlimited Desires) ಆಗರಗಳನ್ನು ತನ್ನೊಳಗಿರಿಸಿಕೊಂಡು ಜನಿಸಿದ್ದಾನೆ ಎಂಬುದು ತಿಳಿದುಬರುವುದು. ತಮ್ಮೊಳಗಿನ ಈ ಬಯಕೆಗಳು ಪ್ರತಿಯೋರ್ವರಿಗೂ ಅತ್ಯಂತ ಪ್ರಿಯವಾಗಿರುವ ವಿಷಯ. ಆದರೆ, ತಮ್ಮೊಳಗೆ ಹುದುಗಿರುವ ಈ ಬಯಕೆಗಳನ್ನು ಸಂಪೂರ್ಣ ರೀತಿಯಲ್ಲಿ ಈಡೇರಿಸಿಕೊಳ್ಳಲು ಈವರೆಗೆ ಯಾರಿಂದಲೂ ಸಾಧ್ಯವಾಗಿಲ್ಲ ಎಂಬುದು ಕೂಡ ಅಷ್ಟೇ ಸತ್ಯ. ಇದಕ್ಕೆ ಇತಿಹಾಸವೂ ಸಾಕ್ಷಿಯಾಗಿದೆ. ಅನೇಕ ವ್ಯಕ್ತಿಗಳು ತಮ್ಮ ಮನದಾಳದ ಬಯಕೆಗಳನ್ನು ಸಂಪೂರ್ಣ ರೀತಿಯಲ್ಲಿ ಈಡೇರಿಸಿಕೊಳ್ಳಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದರು. ಅವರಲ್ಲನೇಕರು ಬಾಹ್ಯನೋಟಕ್ಕೆ ಬಹಳ ಯಶಸ್ವಿ ವ್ಯಕ್ತಿಗಳೆನಿಸಿದರೂ, ಮರಣ ಹೊಂದುವಾಗ,

"ತಮ್ಮ ಇಷ್ಟಾರ್ಥಗಳು ಫಲಿಸಲಿಲ್ಲವಲ್ಲ" ಎಂಬ ವಿಷಾದದೊಂದಿಗೇ ಅವರೆಲ್ಲರೂ ಮರಣ ಹೊಂದಿದರು. ಪ್ರಸಕ್ತ ಜಗತ್ತಿನಲ್ಲಿ ಅವರು ಯಾವ ರೀತಿಯ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳಲು ಬಯಸಿದ್ದರೋ, ಅದ್ಯಾವುದೂ ಅವರಿಗೆ ಸಿದ್ಧಿಸಲಿಲ್ಲ.

ಪ್ರಪಂಚದ ಕುರಿತು ಅಧ್ಯಯನ ನಡೆಸಿದಾಗ, ಜೋಡಿಯ ತತ್ವದಡಿಯಲ್ಲೇ ಪ್ರಪಂಚವು ಚಲಿಸುತ್ತಿದೆ ಎಂಬುದರ ಅರಿವು ನಮಗಾಗುವುದು. ಇಲ್ಲಿರುವ ಪ್ರತಿಯೊಂದು ವಸ್ತುವೂ ತನ್ನದೇ ಆದ ಜೋಡಿಯೊಂದನ್ನು ಹೊಂದಿದೆ. ಪ್ರತಿಯೊಂದು ವಸ್ತುವೂ ತನ್ನ ಜೋಡಿಯೊಂದಿಗೊಡಗೂಡಿ ತನ್ನ ಅಸ್ತಿತ್ವದ ಪರಿಪೂರ್ಣತೆಯ ಭಾವವನ್ನು ಅನುಭವಿಸುವುದು. ಜೋಡಿಯ ಈ ತತ್ವವು ಸಾರ್ವತ್ರಿಕವೂ ಹೌದು. ಪ್ರಥ್ವಿಯ ಆದಿಯಿಂದ ಬಾಹ್ಯಾಕಾಶದವರೆಗೂ ಇದೇ ನೈಸರ್ಗಿಕ ನಿಯಮ ಅನ್ವಯಿಸುವುದು. ಉದಾ: ನೆಗೆಟಿವೆ ಪಾರ್ಟಿಕಲ್ ಜೋಡಿ, ಪಾಸಿಟಿವ್ ಪಾರ್ಟಿಕಲ್ ಜೋಡಿ, ಸಸ್ಯವರ್ಗದಲ್ಲಿ ಗಂಡು ಹೆಣ್ಣೆಂಬ ವರ್ಗ, ಪ್ರಾಣಿಗಳಲ್ಲೂ ಗಂಡು ಪ್ರಾಣಿ, ಹೆಣ್ಣು ಪ್ರಾಣಿ, ಮನುಷ್ಯರಲ್ಲಿ ಸ್ತ್ರೀ–ಪುರುಷರ ಜೋಡಿ ಇತ್ಯಾದಿ.

ಜೋಡಿ ಅಥವಾ ಸಂಯೋಗ ವ್ಯವಸ್ಥೆ ಎಂಬುದು ಎಲ್ಲ ಜೀವಿಗಳಲ್ಲೂ ಸರ್ವೇ ಸಾಮಾನ್ಯ ವಿಷಯವಾಗಿದೆ. ಈ ವಿಶಾಲ ಪ್ರಪಂಚದಲ್ಲಿರುವ ವಿಷಯಗಳ ಪೈಕಿ ಕೇವಲ ಮನುಷ್ಯನ ಅಳಿಯದ ಬಯಕೆಗಳಿಗೆ ಸಂಬಂಧಿಸಿದ ವಿಷಯವು ಮಾತ್ರ ಪ್ರತ್ಯೇಕವಾಗಿದೆ. ಪ್ರತಿಯೋರ್ವ ವ್ಯಕ್ತಿಯೂ ತನ್ನೊಳಗೆ ಆಳವಾದ ಬಯಕೆಗಳನ್ನು ಹೊತ್ತೇ ಜನಿಸುತ್ತಾನೆ. ಆದರೆ, ಅವನು ತನ್ನ ಈ ಅಳಿಯದ ಬಯಕೆಗಳನ್ನು ಈಡೇರಿಸಿಕೊಳ್ಳಲು ಅಸಮರ್ಥನಾದ ಸ್ಥಿತಿಯಲ್ಲೇ ಮರಣಹೊಂದುತ್ತಾನೆ. ಈ ಜಗತ್ತಿನ ಮನುಷ್ಯನೊಳಗೆ ಅಳಿಯದ ಬಯಕೆಗಳ ಆಗರವೇನೋ ಇದೆ. ಆದರೆ, ಅದನ್ನು ಪೂರ್ತಿಕರಿಸಿಕೊಳ್ಳುವ ಸಾಧನಗಳು ಅವನಿಗೆ ಈ ಜಗತ್ತಿನಲ್ಲೆಂದಿಗೂ ದೊರೆಯಲಾರದು. ಏಕೆ ಹೀಗೆ?.

ಏಕೆ ಹೀಗೆ? ಎಂಬುದು ಪ್ರತಿಯೊಬ್ಬ ಸ್ತ್ರೀ–ಪುರುಷರ ಪ್ರಶ್ನೆಯಾಗಿದೆ. ಭೂಮಿಯಲ್ಲಿ ಹುಟ್ಟಿದ ಪ್ರತಿಯೋರ್ವ ಮನುಷ್ಯನೂ ಈ ಪ್ರಶ್ನೆಗೆ ಉತ್ತರ ಹುಡುಕಲು ಬಯಸುತ್ತಾನೆ. ಆದರೆ ಆತನಿಗದರ ಸಮಧಾನಕರ ಉತ್ತರ ದೊರೆಯುವ ಮುನ್ನವೇ ನಿರಾಶೆಯೊಂದಿಗೇ ಈ ಜಗತ್ತಿನಿಂದ ನಿರ್ಗಮಿಸಿ ಬಿಡುತ್ತಾನೆ.

ಮಿಷನರಿ ವ್ಯಕ್ತಿಯಾಗಿದ್ದ ಬಿಲ್ಲಿ ಗ್ರಹಾಂ (Billy Graham) ತನಗಾದ ಅನುಭವವೊಂದನ್ನು ಹೀಗೆ ಬರೆಯುತ್ತಾರೆ: ಅವರಿಗೊಮ್ಮೆ ವಯಸ್ಸಾದ ಆಗರ್ಭ ಶ್ರೀಮಂತರೋರ್ವರ "ಶೀಘ್ರವೇ ಬಂದು ಸಂಧಿಸಿ" ಎಂಬ ಸಾರಾಂಶವುಳ್ಳ ಸಂದೇಶವೊಂದು ಬಂದು ತಲುಪಿತು. ಗ್ರಹಾಂ ಅವರು ತಮ್ಮ ಕಾರ್ಯಕ್ರಮವನ್ನು ಅರ್ಧದಲ್ಲಿಯೇ ಮೊಟಕುಗೊಳಿಸಿ ಆ ವ್ಯಕ್ತಿಯ ಬಳಿ ತಲುಪಲಿಕ್ಕಾಗಿ ಹೊರಟು ನಿಂತರು. ಅವರ ಮನೆ ತಲುಪಿದೊಡನೆಯೇ ಗ್ರಹಾಂ ಅವರನ್ನು ಆ ಆಗರ್ಭ ಶ್ರೀಮಂತರಿದ್ದ ಕೋಣೆಯೊಳಗೆ ಕರೆದೊಯ್ಯಲಾಯಿತು. ಆ ಶ್ರೀಮಂತ ವ್ಯಕ್ತಿ ಯಾವುದೇ ಮುನ್ನುಡಿ ಇಲ್ಲದೇ ಗ್ರಹಾಂರೊಡನೆ ನೇರವಾಗಿ ವಿಷಯಕ್ಕೆ ಬರುತ್ತಾ ಹೀಗೆಂದರು:

You see, I am an old man. Life has lost all meaning. I am going to take a fateful leap into the unknown. Young man can you give me a ray of hope.

"ನಾನೊಬ್ಬ ವೃದ್ಧ ವ್ಯಕ್ತಿ. ನನ್ನ ಜೀವನದ ಕೊನೆಯ ಅಂಚಿನಲ್ಲೀಗ ಬಂದು ನಾನು ನಿಂತಿದ್ದೇನೆ. ಕೆಲವೇ ದಿನಗಳಲ್ಲಿ ನನ್ನೀ ಜೀವನದ ಪಯಣ ಮುಗಿಸಿ ಅಜ್ಞಾತದೆಡೆಗೆ ಮರಳಲಿದ್ದೇನೆ. ಈ ಸಂದರ್ಭದಲ್ಲಿ ಬದುಕಿನ ಕುರಿತು ಭರವಸೆಯ ಕಿರಣಗಳನ್ನೇನಾದರೂ ನನ್ನೊಳಗೆ ಮೂಡಿಸಲು ನಿಮ್ಮಿಂದ ಸಾಧ್ಯವಿದೆಯೇ?"

ಬಿಲ್ಲಿ ಗ್ರಹಾಂರ ಬಳಿ ಆ ವ್ಯಕ್ತಿಯ ಈ ಪ್ರಶ್ನೆಗೆ ಯಾವುದೇ ಸಮಾಧಾನಕರ ಉತ್ತರವಿರಲಿಲ್ಲ. ರಾಜಕೀಯ ನೇತಾರರೂ ಆಗಿದ್ದ ಆ ವ್ಯಕ್ತಿ ಇದೇ ಅಸಮಾಧಾನದ ಸ್ಥಿತಿಯಲ್ಲಿ ಈ ಜಗತ್ತಿನಿಂದ ನಿರ್ಮಿಸಿದರು. ಬಹಳ ಕಾಲ ಸಾಮಾಜಿಕ ಚಟುವಟಿಕೆಗಳಿಂದ ದೂರವಿದ್ದ ಬಳಿಕ 2018ರಲ್ಲಿ ಬಿಲ್ಲಿ ಗ್ರಹಾಂ ಕೂಡ ಮರಣ ಹೊಂದಿದರು.

ಈ ಜಗತ್ತಿನಲ್ಲಿ ಪ್ರತಿಯೊಬ್ಬ ಸ್ತ್ರೀ–ಪುರುಷರ ಅವಸ್ಥೆಯೂ ಇದೇ ಆಗಿದೆ. ಪ್ರತಿಯೊಬ್ಬರೂ ತಮ್ಮ ಜೀವನದ ಸದುದ್ದೇಶವನ್ನು ತಿಳಿದುಕೊಳ್ಳಲು ಬಯಸುತ್ತಾರೆ. ಪ್ರತಿಯೊಬ್ಬರೂ ಸಾರ್ಥಕ ಜೀವನದ ಹುಡುಕಾಟದಲ್ಲಿದ್ದಾರೆ. ಪ್ರತಿಯೋರ್ವರೂ ತಮ್ಮ ಜೀವನವು ಯಶಸ್ವೀ ಜೀವನವಾಗಲಿ, ಅದರಲ್ಲಿ ಸಂಪೂರ್ಣ ಸಾರ್ಥಕತೆ (Fulfilment) ಇರಲಿ ಎಂದೇ ಬಯಸುತ್ತಾರೆ. ಆದರಿಲ್ಲಿ ಬಹುತೇಕ ವ್ಯಕ್ತಿಗಳ ಜೀವನ ವೈಫಲ್ಯದೊಂದಿಗೇ ಕೊನೆಗೊಳ್ಳುತ್ತಿರುವುದು ಮಾತ್ರ ದುರಂತ. ಬಹುತೇಕ ಜನರು 'ಸುಖ ಲೋಲುಪತೆಯ ಸಾಮಾನು ಸಲಕರಣೆಗಳನ್ನು ತಮ್ಮದಾಗಿಸಿಕೊಳ್ಳುವ ಮೂಲಕ ನೆಮ್ಮದಿಯುತ ಬದುಕನ್ನು, ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಲು

ಪ್ರಯತ್ನಿಸುತ್ತಿರುವರು ಎಂಬುದಾಗಿ ಮನುಷ್ಯನ ಮಾನಸಿಕತೆಯ ಕುರಿತ ಅಧ್ಯಯನಗಳು ನಮಗೆ ತಿಳಿಸುತ್ತವೆ. ಆದರೆ ಇದರಲ್ಲಿ ಇದುವರೆಗೆ ಯಾರೊಬ್ಬರೂ ಯಶಸ್ಸಾಗಲಿಲ್ಲ ಎಂಬುದು ಕೂಡ ಅಷ್ಟೇ ಸತ್ಯ.

ಮನುಷ್ಯನ ಪಾಲಿನ ನಿಜವಾದ ಸಮಸ್ಯೆ ಇಲ್ಲಿ ಪದೇ ಪದೇ ಅದೇ ವಿಫಲ ಪ್ರಯೋಗವನ್ನು ಪುನಾರವರ್ತಿಸುತ್ತಿರುವುದಲ್ಲ. ಬದಲಿಗೆ, ಮರು ಮೌಲ್ಯಮಾಪನ (reassessment) ಅಥವಾ ಅವಲೋಕನಕ್ಕೆ ಮನುಷ್ಯನೇಕೆ ತನ್ನನ್ನು ತಾನು ಒಡ್ಡಿಕೊಳ್ಳುತ್ತಿಲ್ಲ ಎಂಬುದೇ ಇಲ್ಲಿರುವ ಮೂಲ ಸಮಸ್ಯೆಯಾಗಿದೆ. ಭೌತಿಕ ಜಗತ್ತಿನ ಸುಖಲೋಲುಪತೆಯ ಸಾಮಾನು ಸಲಕರಣೆಗಳಲ್ಲಿ ಜೀವನದ ಸಾರ್ಥಕತೆ ಹುಡುಕುವುದರಲ್ಲಿ ಯಾವುದೇ ಅರ್ಥವಿಲ್ಲ ಎಂಬುದನ್ನು ಮನುಷ್ಯನು ತಿಳಿದುಕೊಳ್ಳುವಂತಾದರೆ, ಅದೇ ಅವನ ಜೀವನದ ಅವಲೋಕನದ ಮೊದಲ ಹೆಜ್ಜೆ ಎನಿಸುವುದು. ಹಾಗಾದರೆ ಮನುಷ್ಯನ ಜೀವನದ ಸಾರ್ಥಕತೆ ಅಡಗಿರುವುದು ಯಾವುದರಲ್ಲಿ?. ಮನುಷ್ಯನೊಳಗೆ ಅವನ ಬಯಕೆಯ ಪಟ್ಟಿಯು ಬೆಳೆಯುತ್ತಲೇ ಇರುವುದು. ಇದೊಂದು ನೈಸರ್ಗಿಕ ಪ್ರಕ್ರಿಯೆ. ಆದುದರಿಂದ ಅದರ ಪೂರೈಕೆಯ ವ್ಯವಸ್ಥೆಯೂ ಜಗತ್ತಿನಲ್ಲೆಲ್ಲೋ ಇರಬೇಕಾದುದೂ ಸಹಜ ತಾನೇ?.

ಇದನ್ನು ಪ್ರಯಾಣದ ಉದಾಹರಣೆಯ ಮೂಲಕ ತಿಳಿದುಕೊಳ್ಳುವುದು ನಮಗೆ ಹೆಚ್ಚು ಸುಲಭವಾದೀತು. ವ್ಯಕ್ತಿಯೋರ್ವ ಆತ ರೈಲಿನಲ್ಲಿ ಪ್ರಯಾಣಿಸಲಿ ಅಥವಾ ವಿಮಾನದಲ್ಲೇ ಪ್ರಯಾಣಿಸಲಿ ಅವನ ಆ ಪ್ರಯಾಣದಲ್ಲಿ ಎರಡು ಆಯಾಮಗಳಿರುತ್ತವೆ. ಒಂದು ಆತ ಪ್ರಯಾಣದ ಸ್ಥಿತಿಯಲ್ಲಿರುವುದು. ಎರಡನೆಯದು ಅವನು ತನ್ನ ನಿಗದಿತ ಸ್ಥಳವನ್ನು ತಲುಪುವುದು. ಯಶಸ್ವೀ ಪ್ರಯಾಣಕ್ಕಾಗಿ ಈ ಎರಡು ಆಯಾಮಗಳ ನಡುವಿನ ವ್ಯತ್ಯಾಸವನ್ನರಿಯುವುದು ಓರ್ವ ಪ್ರಯಾಣಿಕನ ಪಾಲಿಗೆ ಅತ್ಯಗತ್ಯ. ಯಾರಾದರೂ ಪಯಣಿಗ ಇದನ್ನು ಅರಿಯುವುದರಲ್ಲಿ ವಿಫಲನಾದಲ್ಲಿ, ಅವನೋರ್ವ ಯಶಸ್ವಿ ಪಯಣಿಗನೆನಿಸಿಕೊಳ್ಳಲಾರ.

ತನ್ನ ಪ್ರಯಾಣದ ಸ್ಥಿತಿಯನ್ನೇ ತನ್ನ ನಿಗದಿತ ಗುರಿಯೆಂದುಕೊಳ್ಳುವ ತಪ್ಪು ಮಾಡದವನೇ ಯಶಸ್ವಿ ಪಯಣಿಗನೆನಿಸಿಕೊಳ್ಳುವನು. ವ್ಯಕ್ತಿಯೋರ್ವನಿಗೆ ತನ್ನ ಪ್ರಯಾಣದ ತನ್ಮಧ್ಯೆ ತಾನು ತಲುಪಬೇಕಾದ ಸ್ಥಳದಲ್ಲಿ ದೊರೆಯುವಷ್ಟು ಸವಲತ್ತುಗಳು ದೊರೆಯಲಾರವು ಎಂಬುದು ಸರ್ವೇ ಸಾಮಾನ್ಯ ಸಂಗತಿ. ಇದು ಗೊತ್ತಿರುವ ಪ್ರತಿಯೋರ್ವ ಪ್ರಯಾಣಿಗನೂ ತನ್ನ ಪ್ರಯಾಣದ

ಮಾರ್ಗಮಧ್ಯೆ ಬರಬಹುದಾದ ಸಂಕಷ್ಟಗಳನ್ನು ಸಹಿಸಿಕೊಳ್ಳುತ್ತಾನೆ. ಏಕೆಂದರೆ ಪ್ರಯಾಣದ ಸ್ಥಿತಿಯೆಂಬುದು ಸದಾ ಇರುವ ಸ್ಥಿತಿಯೇನಲ್ಲ ಎಂಬುದು ಪ್ರಯಾಣಿಕನಿಗೆ ಮೊದಲೇ ತಿಳಿದ ವಾಸ್ತವ. ಕೊನೆಗೂ ಅವನ ಪ್ರಯಾಣ ಕೊನೆಗೊಂಡು, ಅವನು ತಲುಪಬೇಕಾದ ಸ್ಥಳವನ್ನಾತನು ತಲುಪುವನು. ಆ ಬಳಿಕ ಅವನು ತಾನು ಬಯಸಿದ ಎಲ್ಲ ಸವಲತ್ತುಗಳು ಅವನಿಗಲ್ಲಿ ದೊರಕುವುದು.

ನಮ್ಮ ಈ ಪ್ರಸ್ತುತ ಬದುಕು ಬಹಳ ಅಲ್ಪಕಾಲಿಕವಾಗಿದೆ. ಇದೊಂದು ಪಯಣದ ಅವಧಿ ಎನ್ನುವುದಕ್ಕೆ ಲೌಕಿಕ ಬದುಕಿನ ಈ ಅಲ್ಪಾವಧಿಯೇ ಖುದ್ದು ಪುರಾವೆಯಾಗಿದೆ. ಬದುಕೆಂಬ ಪಯಣದ ಈ ಅವಧಿಯಲ್ಲಿ ನಾವು ನಮಗೆ ಬಯಸಿದ್ದೆಲ್ಲವನ್ನೂ ಪಡೆಯುವುದು ಅಸಾಧ್ಯದ ಮಾತು. ಈ ಅವಧಿಯನ್ನು ಮುಗಿಸಿ ನಮ್ಮ ಗಮ್ಯಸ್ಥಾನವನ್ನು ತಲುಪಿದ ಬಳಿಕ, ನಮ್ಮೆಲ್ಲಾ ಬಯಕೆಗಳಲ್ಲಿ ಈಡೇರಬಲ್ಲವು.

ಈ ಮೊದಲೇ ಹೇಳಿದಂತೆ ನಮ್ಮ ಬದುಕು ಎರಡು ಹಂತಗಳಲ್ಲಿ ವಿಂಗಡಿಸಲ್ಪಟ್ಟಿದೆ; ಮರಣಪೂರ್ವ ಬದುಕು ಮತ್ತು ಮರಣಾನಂತರದ ಬದುಕು. ಮರಣಪೂರ್ವದ ಲೌಕಿಕಜೀವನವು ಪಯಣದ ಅಲ್ಪಾವಧಿಯಾದರೆ, ಮರಣಾನಂತರದ ಬದುಕು ಗಮ್ಯಸ್ಥಾನವನ್ನು ತಲುಪುವ ಶಾಶ್ವತ ಪಾರಲೌಕಿಕ ಬದುಕಾಗಿದೆ. ಪ್ರತಿಯೋರ್ವ ವ್ಯಕ್ತಿಯೂ ಅರಿಯಬೇಕಾದ ವಾಸ್ತವವಿದು. ಈ ವಾಸ್ತವವು ಪ್ರತಿಯೋರ್ವ ಸ್ತ್ರೀ–ಪುರುಷರಿಗೆ ಅವರ ಬದುಕಿನ ನೈಜ ಉದ್ದೇಶ ಏನಾಗಿರಬೇಕು? ಎಂಬುದನ್ನು ಪರಿಚಯಿಸುವುದರ ಮೂಲಕ ಅವರ ಬದುಕನ್ನು ಹೆಚ್ಚು ಅರ್ಥಪೂರ್ಣಗೊಳಿಸುವುದು.ಮನುಷ್ಯನ ಬದುಕಿನಲ್ಲಿ ನೆಮ್ಮದಿಯ ಮೂಲವನ್ನದು ದೊರಕಿಸಿಕೊಡುವುದು.

ಪಾರಲೌಕಿಕ ಬದುಕನ್ನು ಅರಿಯಲು ಹೊರಟಾಗ, 'ಮರಣದ ಬಳಿಕ ಮನುಷ್ಯನಿಗೆ ಪುನರ್ಜೀವನ ದೊರಕಲು ಸಾಧ್ಯವೇ?', ಈ ಜಗತ್ತಿನಲ್ಲಿ ನಾವು ಬದುಕನ್ನು ಅನುಭವಿಸುತ್ತಿರುವಂತೆಯೇ ಮರಣಾನಂತರವೂ ಬದುಕನ್ನು ಅನುಭವಿಸಲು ಸಾಧ್ಯವೇ? ಎಂಬೆಲ್ಲಾ ಪ್ರಶ್ನೆಗಳು ಎದುರಾಗುತ್ತವೆ. ಈ ಪ್ರಶ್ನೆಗೆ ಉತ್ತರ ಸಕರಾತ್ಮಕವಾಗಿದೆ. ಬೇರೆಲ್ಲಾ ಸಂಗತಿಗಳನ್ನು ಅರಿಯಲು ನಾವು ಹೇಗೆ ವಿಜ್ಞಾನದ ಮೊರೆ ಹೋಗುತ್ತೇವೆಯೋ ಅದೇ ರೀತಿ ಈ ಪ್ರಶ್ನೆಗೂ ನಾವು ವೈಜ್ಞಾನಿಕ ವಿಧಾನದ ಮೂಲಕ ಉತ್ತರ ಪಡೆದುಕೊಳ್ಳಲು ಖಂಡಿತಾ ಸಾಧ್ಯವಿದೆ.

ವಾಸ್ತವವನ್ನು ಅರಿಯಲು ಬಳಸಬೇಕಾದ ವೈಜ್ಞಾನಿಕ ವಿಧಾನ ಯಾವುದು?. ಯಾವ ವಿಷಯವನ್ನು ನಾವು ಅರಿಯಲು ಹೊರಟಿರುವೆವೋ, ಅದು ತನ್ನ ಪರಿಪೂರ್ಣ ರೂಪದಲ್ಲಿ

ವಿಜ್ಞಾನಿಗಳ ಮುಂದೆ ಪ್ರತ್ಯಕ್ಷಗೊಳ್ಳಬೇಕು ಎಂದು ಬಯಸುವುದು ಖಂಡಿತವಾಗಿಯೂ ವೈಜ್ಞಾನಿಕ ವಿಧಾನವಲ್ಲ. ಒಂದು ವೇಳೆ ಈ ರೀತಿಯ ಷರತ್ತನ್ನೇನಾದರೂ ವಿಧಿಸಿದಲ್ಲಿ ಯಾವುದೇ ವಿಷಯದ ವಾಸ್ತವವನ್ನು ಅರಿಯಲು ನಮಗೆ ಸುತಾರಾಂ ಸಾಧ್ಯವಿಲ್ಲ. ಈ ರೀತಿಯ ಷರತ್ತನ್ನು ಹೊಂದಿರುವ ವಿಧಾನವನ್ನೇನಾದರೂ ನಾವು ಬಳಸಿದಲ್ಲಿ, ಜ್ಞಾನದ ಏಳ್ಗೆಯ ಮೆಟ್ಟಿಲನ್ನು ಏರಲು ನಮಗೆ ಸಾಧ್ಯವಾಗದು. ವಾಸ್ತವದ ಕುರಿತ ಯಾವುದೇ ಕೊಂಡಿ ನಮಗೆ ದೊರಕದೇ, ಶಾಶ್ವತವಾಗಿ ಅಜ್ಞಾನದ ಕತ್ತಲಲ್ಲೇ ನಾವು ಮುಳುಗಿರಬೇಕಾಗುವುದು. ಏಕೆಂದರೆ ಯಾವುದೇ ವಾಸ್ತವವನ್ನು ನಾವು ಅರಿಯಲು ಹೊರಟಾಗ, ಅದು ತನ್ನ ಪರಿಪೂರ್ಣ ರೂಪದಲ್ಲಿ ಪರ್ವತದಂತೆ ಧುತ್ತನೆ ನಮ್ಮೆದುರು ಪ್ರತ್ಯಕ್ಷಗೊಳ್ಳುವುದಿಲ್ಲ.

ವಾಸ್ತವವನ್ನು ತಲುಪಬೇಕಾದ ವೈಜ್ಞಾನಿಕ ವಿಧಾನ ಹೇಗೆಂದರೆ, ವಿಜ್ಞಾನಿಯೋರ್ವ ಯಾವುದಾದರೂ ವಾಸ್ತವದ ಬೆನ್ನು ಹಿಡಿದು, ಅದರ ಕುರಿತು ಸಂಶೋಧಾನತ್ಮಕ ಅಧ್ಯಯನದಲ್ಲಿ ತೊಡಗಿಕೊಂಡಾಗ ಆತನೆದುರು ವಾಸ್ತವದ ಕುರಿತಾದ ಒಂದು ಕೊಂಡಿ ಅಥವಾ ಅದರ ಕುರಿತಾದ ಯಾವುದಾದರೂ ಸುಳಿವು ತೆರೆದುಕೊಳ್ಳುತ್ತದೆ. ಆ ಕೊಂಡಿ ಅಥವಾ ಸುಳಿವಿನ ಮೂಲಕ ಅವನು ಈ ಮುಂಚೆ ತನಗಾಗಲೀ, ಈ ಜಗತ್ತಿಗಾಗಲೀ ತಿಳಿಯದಿರದ ವಾಸ್ತವಕ್ಕೆ ತಲುಪುತ್ತಾನೆ. ಈ ಜಗತ್ತಿನ ಪ್ರತಿಯೊಂದು ಸಂಶೋಧನೆಯನ್ನೂ ಸುಳಿವಿನ ಆಧಾರದಲ್ಲೇ ಕಂಡುಹಿಡಿಯಲಾಗಿದೆ. ಯಾವುದೇ ವಿಷಯದ ಕುರಿತ ಸುಳಿವು ಅಥವಾ ಕೊಂಡಿ ಅದರ ವಾಸ್ತವದೆಡೆಗೆ ತಲುಪಿಸುವ ಮುಖ್ಯ ವಾಹಿನಿಯಾಗಿದೆ.

ಉದಾಹರಣೆಗೆ ಹದಿಮೂರು ಶತಕೋಟಿ ವರ್ಷಗಳ ಹಿಂದೆ 'ಬಿಗ್ ಬ್ಯಾಂಗ್' ನ ಘಟನೆ ಸಂಭವಿಸಿತ್ತು ಎಂದು ವಿಜ್ಞಾನ ಹೇಳುತ್ತದೆ. 'ಜೀವ ವಿಕಸನ' ಪ್ರಕ್ರಿಯೆಯು ಸದಾ ಜಾರಿಯಲ್ಲಿರುವುದು ಎಂದು ವಿಜ್ಞಾನ ನಂಬುತ್ತದೆ ಜೊತೆಗೆ ನಾವು ವಾಸಿಸುತ್ತಿರುವ ಸೌರಮಂಡಲವು ಸದಾ ವಿಸ್ತರಿಸುತ್ತಲೇ ಇರುವ ಜಗತ್ತಾಗಿದೆ (expanding universe) ಎಂದು ಕೂಡ ಅದು ಹೇಳುತ್ತದೆ. ವಿಜ್ಞಾನ ಹೇಳಿದ ಈ ಎಲ್ಲ ವಿಷಯಗಳನ್ನು ಇಂದಿನ ಜಗತ್ತು ಸಾರ್ವಕಾಲಿಕ ಸತ್ಯ ಎಂಬಂತೆ ಸ್ವೀಕರಿಸಿದೆ. ಈ ಮೇಲೆ ಹೇಳಿದ ವಿಷಯಗಳ ಪೈಕಿ ಯಾವುದೊಂದನ್ನೂ ಮನುಷ್ಯ ಪ್ರತ್ಯಕ್ಷವಾಗಿ ತನ್ನ ಕಣ್ಣಾರೆ ಕಂಡಿಲ್ಲ. ಬದಲಿಗೆ ಈ ವಿಷಯಗಳ ಕುರಿತಾದ ಸುಳಿವಿನ ಬೆನ್ನು ಹಿಡಿದು ಹೊರಟಾಗ, ಆ ಸುಳಿವಿನ ಆಧಾರದಲ್ಲಿ ಸಂಶೋಧನೆಯಲ್ಲಿ ತೊಡಗಿಕೊಂಡಾಗ ಒಂದು ದೊಡ್ಡ

ವಾಸ್ತವವನ್ನು ತಲುಪಲು ಮನುಷ್ಯನಿಗೆ ಸಾಧ್ಯವಾಯಿತು. ಈ ಮಹಾ ವಾಸ್ತವವು ನೇರವಾಗಿ ಆತನ ವೀಕ್ಷಣೆಗೆ ಬರದಿದ್ದರೂ, ಅದು ಸತ್ಯ ಎಂಬುದು ಆತನಿಗೆ ಮನದಟ್ಟಾಯಿತು. ಇಂತಹ ವಾಸ್ತವಗಳನ್ನು ಈ ಹಿಂದೆ 'ಸಂಭವಿಸಲ್ಪಟ್ಟ ಘಟನೆ' ಎಂಬ ಆಧಾರದಲ್ಲಿ ಮಾನವ ಜಗತ್ತು ಒಪ್ಪಿಕೊಂಡಿತು. ಈ ಎಲ್ಲಾ ವಿಷಯಗಳ ಹಿಂದೆ ಕೇವಲ ಅದರ ಕುರಿತಾದ ಸುಳಿವುಗಳ ಹೊರತಾಗಿ ಬೇರೇನನ್ನೂ ಮಾನವ ದೃಷ್ಟಿಗಳು ನೇರವಾಗಿ ವೀಕ್ಷಿಸಿಲ್ಲ ಎಂಬುದಿಲ್ಲಿ ಸ್ಪಷ್ಟ.

ಮರಣಾನಂತರದ ಬದುಕು ಅಥವಾ ಪಾರಲೌಕಿಕ ಜೀವನದ ವಾಸ್ತವದ ಸತ್ಯಾಸತ್ಯತೆ ಅರಿಯಲು ಕೂಡ ನಾವು ಇದೇ ವಿಧಾನವನ್ನು ಬಳಸಬೇಕು. ಮರಣಾನಂತರದ ಬದುಕಿನ ಕುರಿತು ಕೂಡ ಸ್ಪಷ್ಟವಾದ ಸುಳಿವು ಲಭ್ಯವಿದೆ. ಈ ಸ್ಪಷ್ಟ ಸುಳಿವಿನ ಆಧಾರದಲ್ಲಿ ನಾವು ಗಂಭೀರವಾದ ಅಧ್ಯಯನ ನಡೆಸಿದ್ದೇ ಆದಲ್ಲಿ, ಮರಣದ ಬಳಿಕವೂ ಜೀವನವಿರುವುದು ಸತ್ಯ, ಸಾವಿನ ಬಳಿಕ ಪ್ರತಿಯೋರ್ವರಿಗೂ ಪುನರ್ಜೀವನ ಸಿಗುವುದು ಶತಸಿದ್ಧ ಎಂಬುದನ್ನು ನಾವು ಮನಗಾಣಲು ಸಾಧ್ಯ.

ಹಾಗಾದರೆ ಮರಣಾನಂತರವೂ ಪುನರ್ಜೀವನವಿದೆ ಎಂಬುದನ್ನು ಸೂಚಿಸುವ ಆ ಸುಳಿವು ಯಾವುದು?. ಉದಾಹರಣೆಗೆ ಮನುಷ್ಯನ ದೇಹವು ಅಸಂಖ್ಯಾತ ಜೀವಕೋಶಗಳ ಭಂಡಾರವಾಗಿದೆ. ಒಂದೆಡೆ ದೇಹದಲ್ಲಿರುವ ಹಳೆ ಜೀವಕೋಶಗಳು ಸತ್ವ ಕಳೆದುಕೊಳ್ಳುತ್ತಿದ್ದರೆ, ಇನ್ನೊಂದೆಡೆ ನಮ್ಮೊಳಗಿರುವ ಜೀರ್ಣಾಂಗ ವ್ಯವಸ್ಥೆಯು ನಾವು ಸೇವಿಸಿದ ಆಹಾರವನ್ನು ಹೊಸ ಜೀವಕೋಶಗಳನ್ನಾಗಿ ಪರಿವರ್ತಿಸುವ ಕಾರ್ಯನಿರ್ವಹಿಸುತ್ತಿರುತ್ತದೆ. ನಮ್ಮ ಜೀರ್ಣಾಂಗ ವ್ಯವಸ್ಥೆಯನ್ನು ಜೀವಕೋಶಗಳನ್ನು ನಿರ್ಮಿಸುವ ಕಾರ್ಖಾನೆ ಎಂದು ಕರೆದರೆ ತಪ್ಪಾಗಲಿಕ್ಕಿಲ್ಲ. ಮನುಷ್ಯ ದೇಹದಲ್ಲಿರುವ ಈ ವ್ಯವಸ್ಥೆಯ ಕಾರಣದಿಂದ ಪ್ರತಿ ಹತ್ತುವರ್ಷಗಳಿಗೊಮ್ಮೆ ನಮ್ಮ ಇಡೀ ದೇಹವು ತನ್ನನ್ನು ತಾನು ಸಂಪೂರ್ಣವಾಗಿ ಬದಲಾವಣೆಗೊಡ್ಡಿಕೊಳ್ಳುತ್ತದೆ. ಅರ್ಥಾತ್, ಸಂಪೂರ್ಣ ಹೊಸ ಜೀವಕೋಶಗಳೊಂದಿಗೆ ಹೊಸದೆನ್ನಬಹುದಾದ ದೇಹವು ಅಸ್ತಿತ್ವಕ್ಕೆ ಬರುತ್ತದೆ.

ಈ ರೀತಿ ದೇಹದೊಳಗಿನ ಹಳೆ ಜೀವಕೋಶಗಳು ಸಾವಿಗೀಡಾಗಿ, ಹೊಸಜೀವಕೋಶಗಳು ಅಸ್ತಿತ್ವಕ್ಕೆ ಬರುತ್ತಲೇ ಇರುತ್ತವೆ. ಈ ಆಧಾರದಲ್ಲಿ ಹೇಳುವುದಾದರೆ ನಮ್ಮ ದೇಹವು ತನ್ನನ್ನು ತಾನು ಪದೇ ಪದೇ ಸಾವಿಗೊಡ್ಡಿಕೊಳ್ಳುತ್ತದೆ. ಪ್ರತಿ ಹತ್ತುವರ್ಷಗಳಿಗೊಮ್ಮೆ ಅದು ತನ್ನ ಸ್ವರೂಪವನ್ನು ಬೇರೆಯದೇ ರೂಪದಲ್ಲಿ ಪರಿವರ್ತಿಸಿಕೊಂಡಿರುತ್ತದೆ. ಇದರ ಹೊರತಾಗಿಯೂ ಮನುಷ್ಯನ

ಮಾನಸಿಕ ಅಸ್ತಿತ್ವ ಮಾತ್ರ, 'ತನಗೆ ಸಾವಿಲ್ಲ, ತಾನು ಅಮರ' ಎನ್ನುವ ಹಾಗೆ ತನ್ನ ಹಳೇ ಸ್ಥಿತಿಯನ್ನು ಕಾಯ್ದುಕೊಂಡಿರುತ್ತದೆ. ಮನುಷ್ಯನ ಮಾನಸಿಕ ಅಸ್ತಿತ್ವವೇ ಆತನ ನೈಜ ಅಸ್ತಿತ್ವವಾಗಿದೆ. ದೇಹದಲ್ಲಿರುವ ಜೀವಕೋಶಗಳ ನಾಶದ ಹೊರತಾಗಿಯೂ ಮನುಷ್ಯನ ಮಾನಸಿಕ ಅಸ್ತಿತ್ವವು ಸಾಯುವುದಿಲ್ಲ. ಇಲ್ಲಿ, 'ಮೂಲತಃ ಮನುಷ್ಯನೋರ್ವ ಶಾಶ್ವತ ಜೀವಿ' ಎಂಬ ಸುಳಿವು ನಮಗೆ ದೊರಕುವುದು. ಮನುಷ್ಯನ ಅಸ್ತಿತ್ವದ ಅಲ್ಪಾವಧಿ ಮರಣಪೂರ್ವ ಲೌಕಿಕ ಜೀವನವಾದರೆ, ಮರಣಾನಂತರದ ಪಾರಲೌಕಿಕ ಜೀವನ ಆತನಿಗೆ ಅಮರತ್ವ ದೊರಕಿಸಿ ಕೊಡುವ ಆತನ ಬದುಕಿನ ಉಳಿದ ಶಾಶ್ವತ ಅವಧಿಯಾಗಿದೆ.

ಪರಲೋಕದ ಜೀವನ ಇದೆ ಎಂಬುದರ ಕುರಿತು ಇನ್ನೊಂದು ಬಲವಾದ ಸುಳಿವು ಏನೆಂದರೆ, ಮನುಷ್ಯನು ಸದಾ ಸಮಾಜದಲ್ಲಿ ನ್ಯಾಯ (Justice) ಇರಬೇಕು ಎಂದು ಬಯಸುವ ಜೀವಿ. ನಿಸರ್ಗದತ್ತವಾಗಿ ಮನುಷ್ಯನು ಮನಸ್ಸಿನಲ್ಲಿ ನ್ಯಾಯದ ಪರಿಕಲ್ಪನೆ ಅಚ್ಚೊತ್ತಿದೆ.ಸತ್ಕರ್ಮಿಯು ಉತ್ತಮ ಪ್ರತಿಫಲ ಪಡೆದು ವಿಜಯಿಯಾಗಬೇಕು.ದುಷ್ಕರ್ಮಿಯು ಅವನ ಕರ್ಮದ ಪ್ರತಿಫಲವನ್ನು ಅನುಭವಿಸಬೇಕು ಎಂಬ ಪ್ರಕೃತಿದತ್ತ ತುಡಿತ ಮನಷ್ಯನೊಳಗೆ ಸದಾ ಬೇರೂರಿರುತ್ತದೆ. ಮನುಷ್ಯನ ಮನಸ್ಸಿನೊಳಗೆ ಹುದುಗಿರುವ ಈ ತುಡಿತದ ಸುಳಿವನ್ನು ಮುಂದಿರಿಸಿಕೊಂಡು ನಾವೇನಾದರೂ ಅವಲೋಕಿಸಿದಲ್ಲಿ, ಈ ಲೌಕಿಕ ಜೀವನದ ಅಲ್ಪಾವಧಿಯು ವ್ಯಕ್ತಿಯ ಕರ್ಮಕ್ಕನುಸಾರವಾಗಿ ಫಲವನ್ನು ಅನುಭವಿಸಲು ಏನೇನೂ ಸಾಲದು ಎಂದೆನಿಸದೇ ಇರದು. ಆದುದರಿಂದ ಸತ್ಕರ್ಮಿಗೆ ಸತ್ಫಲ ದೊರೆಯುವಂತಾಗಲು, ದುಷ್ಕರ್ಮಿಗೆ ಆತನ ಕರ್ಮಾನುಸಾರ ಶಿಕ್ಷೆ ಅನುಭವಿಸುವಂತಾಗಲು ಮರಣಾನಂತರವೂ ಒಂದು ದೀರ್ಘಾವಧಿಯ ಜೀವನ ಖಂಡಿತಾ ಇರಬೇಕು ಎಂಬುದು ನ್ಯಾಯದ ಬೇಡಿಕೆ ಆಗಿದೆ.

ಪರಲೋಕದ ಜೀವನದ ಕುರಿತು ಇರುವ ಇನ್ನೊಂದು ಸುಳಿವು ಏನೆಂದರೆ, ಪ್ರಕತಿದತ್ತವಾಗಿ ಮನುಷ್ಯನು ಪರಿಪೂರ್ಣತೆಯನ್ನು ಬಯಸುವ ಜೀವಿಯಾಗಿದ್ದಾನೆ. ಅರ್ಥಾತ್, ಹುಟ್ಟಿನಿಂದಲೇ ತಾನಿರುವ ಜಗತ್ತು ಪರಿಪೂರ್ಣತೆಯಿಂದ (Perfect world) ಕೂಡಿರಬೇಕೆಂಬ ತುಡಿತವಿರುವ ಜೀವಿ ಅವನು. ಆದರೆ, ನಾವು ಬದುಕುತ್ತಿರುವ ಈ ಜಗತ್ತು ಬಹಳ ಇತಿಮಿತಿಗಳಿಂದ ಕೂಡಿದ (limitations) ಜಗತ್ತಾಗಿದೆ. ಮನುಷ್ಯನು ಬಯಸುವ ಪರಿಪೂರ್ಣತೆಯ ಬದುಕು ಈ ಲೌಕಿಕ ಜೀವನದಲ್ಲಿ ಆತನಿಗೆ ದೊರೆಯುವುದು ಅಸಾಧ್ಯದ ಮಾತು. ಈ ಕುರಿತು ನಾವು ಆಳವಾಗಿ

ಚಿಂತಿಸಿದಲ್ಲಿ, ಮನುಷ್ಯನು ಬಯಸುವ ಪರಿಪೂರ್ಣ ಜೀವನ ಆತನಿಗೆ ಇತಿಮಿತಿಯುಳ್ಳ ಲೌಕಿಕ ಜೀವನದಲ್ಲಿ ದೊರೆಯದೇ ಹೋದಲ್ಲಿ, ಮರಣದ ಬಳಿಕವಾದರೂ ಆತನಿಗದು ಸಿಗಬೇಕು ಎಂಬ ತೀರ್ಮಾನಕ್ಕೆ ಬರದೆ ಇರಲಾರೆವು.

ಇದೇ ರೀತಿ ಪರಲೋಕದ ಜೀವನವನ್ನು ಸಾಬೀತುಪಡಿಸಬಲ್ಲ ಇನ್ನೊಂದು ಸುಳಿವು ಏನೆಂದರೆ, ಬೇರೆಲ್ಲಾ ಜೀವಿಗಳಿಗೆ ಹೋಲಿಸಿದಲ್ಲಿ ಮನುಷ್ಯನು 'ನಾಳೆಯ ಪರಿಕಲ್ಪನೆ' ಯಲ್ಲಿ ಬದುಕುವ ಜೀವಿಯಾಗಿದ್ದಾನೆ. ಅವನು ಬದುಕುವ ಪ್ರತಿ ದಿನವೂ ಅವನು ನಾಳೆಯ ನಿರೀಕ್ಷೆಯಲ್ಲೇ ಬದುಕುತ್ತಿರುತ್ತಾನೆ. ಅವನಲ್ಲಿ ಹುದುಗಿರುವ ಆ ನಾಳೆಯ (Tomorrow) ಪರಿಕಲ್ಪನೆಗೆಂದೂ ಅಳಿವಿಲ್ಲ. ಇದನ್ನು ನಾವು ಗಂಭೀರವಾಗಿ ಪರಿಗಣಿಸಿದಲ್ಲಿ, ಮರಣಾನಂತರವೂ ಒಂದು ಬದುಕಿದೆ ಎಂಬುದನ್ನು ತಿಳಿದುಕೊಳ್ಳಲು ನಮಗೆ ಹೆಚ್ಚು ಸುಲಭವಾಗುವುದು. ಮರಣಾನಂತರದ ಬದುಕಿಗೆ ಇತಿಮಿತಿ ಎಂಬುದಿಲ್ಲ. ಅದು ಶಾಶ್ವತ ಬದುಕು. ಆ ಪಾರಲೌಕಿಕ ಬದುಕಿನಲ್ಲಿ ಅವನು ಬಯಸಿದ್ದೆಲ್ಲವೂ ಅವನಿಗಲ್ಲಿ ದೊರೆಯುವುದು.

ಮರಣಾನಂತರದ ಪರಲೋಕ ಜೀವನ ಇನ್ನಿತರ ಘಟನೆಗಳಂತೆಯೇ ಈಗಾಗಲೇ ಸಾಬೀತುಗೊಂಡ ವಾಸ್ತವ ಎನ್ನಲಡ್ಡಿಯಿಲ್ಲ. ಬಯಸಿದ್ದೆಲ್ಲವೂ ಸಿಗುವ, ಚಿರಯೌವ್ವನರಾಗಿ ಬದುಕುವ, ಸಾವು, ರೋಗ-ರುಜಿನಗಳೆಂದೂ ಕಾಡದ ಆ ಪರಿಪೂರ್ಣ ಸ್ವರ್ಗಲೋಕದ ಬದುಕನ್ನು ತನ್ನದಾಗಿಸಿಕೊಳ್ಳುವ ಸೌಭಾಗ್ಯ ತನ್ನಿಂತಾನೆ ಯಾರಿಗೂ ದೊರೆಯಲಾರದು. ಯಾವ ಸ್ತ್ರೀ-ಪುರುಷರು ಈ ಲೌಕಿಕ ಬದುಕಿನ ಪರೀಕ್ಷೆಯಲ್ಲಿ ತೇರ್ಗಡೆಯಾಗುವರೋ, ಅಂತಹವರು ಮಾತ್ರ ಪರಲೋಕದಲ್ಲಿ ಬಯಸಿದ್ದೆಲ್ಲವನ್ನೂ ಪಡೆಯುವ ಸೌಭಾಗ್ಯವಂತರೆನಿಸುವರು. ಯಾವುದೇ ರೀತಿಯ ಪ್ರತಿಫಲ ಅಥವಾ ಸನ್ಮಾನ ದೊರಕುವುದು ಅದಕ್ಕೆ ಅರ್ಹರಾದವರಿಗೆ ಮಾತ್ರ ಎಂಬುದು ಪ್ರಕೃತಿದತ್ತವಾದ ನಿಯಮ. ಅನರ್ಹರು ಎಂದಿಗೂ ಯಾವುದೇ ರೀತಿಯ ಪ್ರತಿಫಲಕ್ಕಾಗಲೀ, ಸನ್ಮಾನಕ್ಕಾಗಲೀ ಪಾತ್ರರಾಗಲಾರರು.

ಹಾಗಾದರೆ ಯಾವ ಅರ್ಹತೆಯ ಆಧಾರದ ಮೇಲೆ ಪರಲೋಕದ ಶಾಶ್ವತ ಯಶಸ್ಸನ್ನು ನಮ್ಮದಾಗಿಸಿಕೊಳ್ಳಲು ಸಾಧ್ಯ?. ಆ ಅರ್ಹತೆಯನ್ನು ಪಡೆಯಲು ಪಾಲಿಸಬೇಕಾದ ಸೂತ್ರ ಯಾವುದು?. ಅದಕ್ಕಿರುವ ಉತ್ತರ ಒಂದೇ ಒಂದು. ಅದೇ ಆತ್ಮ ಸಂಸ್ಕರಣೆ. ಹೌದು. ಆತ್ಮ

ಸಂಸ್ಕರಣೆಯೊಂದೇ (purification of soul) ಪರಲೋಕದ ಯಶಸ್ಸನ್ನು ನಮ್ಮದಾಗಿಸಿಕೊಳ್ಳಲು ಬಳಸಬೇಕಾದ ಪ್ರಮುಖ ಸೂತ್ರವಾಗಿದೆ.

ಯಾರು ಮುಂಬರಲಿರುವ ಪರಲೋಕದ ಆ ಶಾಶ್ವತ ಸುಖಮಯ ಜೀವನವನ್ನು ತಮ್ಮದಾಗಿಸಿಕೊಳ್ಳಲು ಬಯಸುವರೋ, ಅವರು ತಮ್ಮ ಕಣ್ಣೆದುರು ಕಾಣುತ್ತಿರುವ ಈ ಲೌಕಿಕ ಜಗತ್ತಿನಲ್ಲೇ ಕಣ್ಣಿಗೆ ಕಾಣಿಸದ ಆ ಪರೋಕ್ಷ ಲೋಕದ ಮೇಲೆ ವಿಶ್ವಾಸವಿರಿಸಿ, ತಮಗೆ ನೀಡಿದ ಆಯಸ್ಸನ್ನು ಆ ಜೀವನಕ್ಕೆ ಬೇಕಾದ ಪೂರ್ವತಯಾರಿ ನಡೆಸಲು ವಿನಿಯೋಗಿಸಬೇಕು. ಪರೋಕ್ಷದ ಮೇಲೆ ವಿಶ್ವಾಸವಿರಿಸುವುದು ಅಷ್ಟು ಸುಲಭದ ಮಾತೇನಲ್ಲ. ಅದು ಗೊಂದಲಗಳ ಗೂಡಿನಲ್ಲಿ ಸತ್ಯವನ್ನು ಅನ್ವೇಷಿಸಿದಷ್ಟೇ ಕ್ಲಿಷ್ಟಕರ. ಇದರ ಹೊರತಾಗಿಯೂ ಯಾರು ಸತ್ಯವನ್ನು ಕಂಡುಕೊಂಡು ಅದರ ಮೇಲೆ ವಿಶ್ವಾಸವಿರಿಸಿದರೋ, ಅವರು ತಮ್ಮ ಎಲ್ಲ ನಕರಾತ್ಮಕ ಅನುಭವಗಳ ಹೊರತಾಗಿಯೂ ಸಕರಾತ್ಮಕ ಮನೋಭಾವದಲ್ಲಿ ದೃಢತೆಯನ್ನು ಕಂಡುಕೊಂಡರು. ಸತ್ಯದ ಸಾಕ್ಷಾತ್ಕಾರ ಹೊಂದುವುದರ ಅರ್ಥ ಮೃಗೀಯತೆಯಿಂದ ಉನ್ನತ ಮಾನವೀಯತೆಯ ಕಡೆಗೆ ಅಡಿ ಇಡುವುದಾಗಿದೆ. ಉನ್ನತ ಮಾನವೀಯತೆಯನ್ನು ಹೊಂದುವುದೆಂದರೆ ಸ್ವಾರ್ಥ, ಅಹಂಕಾರ, ದುರಾಸೆ, ಅಪ್ರಾಮಾಣಿಕತೆ, ಅಪನಂಬಿಕೆ ಮತ್ತು ಬಂಡಾಯದಂತಹ ಎಲ್ಲ ನಕರಾತ್ಮಕ ಮನೋಭಾವಗಳಿಂದ ರಕ್ಷಿಸಿಕೊಂಡು ತಮ್ಮನ್ನು ತಾವು ಸ್ವರ್ಗಕ್ಕೆ ಅರ್ಹರನ್ನಾಗಿಸಿಕೊಳ್ಳುವುದಾಗಿದೆ. ಒಟ್ಟಾರೆ ದೇವಾಧಾರಿತ ಜೀವನಕ್ರಮವನ್ನು ಸಂಪೂರ್ಣವಾಗಿ ಪಾಲಿಸುವುದೇ ಸತ್ಯದ ಸಾಕ್ಷಾತ್ಕಾರ ಹೊಂದುವುದರ ಸಾರಾಂಶವಾಗಿದೆ.

ದೇವಾಧಾರಿತ ಜೀವನಕ್ರಮವನ್ನು ಪಾಲಿಸುತ್ತಿರುವವರು ನೈಜ ಮಾನವೀಯತೆಯ ಪ್ರತಿಬಿಂಬವಾಗಿರುವರು. ಅವರು ದೇವನು ಮನುಷ್ಯನಿಗಾಗಿ ನಿರ್ಮಿಸಿದ ಶಾಶ್ವತ ಸ್ವರ್ಗೋದ್ಯಾನಗಳಲ್ಲಿ ಪ್ರವೇಶ ಹೊಂದುವ ಸೌಭಾಗ್ಯವಂತರಾಗುವರು. ಯಾರು ಇದಕ್ಕೆ ತದ್ವಿರುದ್ಧವಾಗಿ ಕಿಂಚಿತ್ತೂ ದೇವಭಯವಿಲ್ಲದೆ, ಮೃಗೀಯತೆಯನ್ನು ಮೈಗೂಡಿಸಿಕೊಂಡು ಸ್ವೇಚ್ಛಾಚಾರಿಗಳಾಗಿ ಬದುಕುವರೋ, (ನಾವು ಕೆಲಸಕ್ಕೆ ಬಾರದ ವಸ್ತುಗಳನ್ನು ಕಸದ ಬುಟ್ಟಿಗೆ ಎಸೆಯುವಂತೆ) ಅಂತಹ ಕೆಲಸಕ್ಕೆ ಬಾರದ ದುಷ್ಕರ್ಮಿಗಳಿಗೆಂದೇ ನರಕವೆಂಬ ಕಸದಡಬ್ಬಿಯು ಸೃಷ್ಟಿಸಲ್ಪಟ್ಟಿರುವುದು. ಅಂತಹ ದುಷ್ಕರ್ಮಿಗಳನ್ನು ನರಕಕ್ಕೆ ಎಸೆಯಲಾಗುವುದು. ಅವರ ಪಾಲಿಗದು ಶಾಶ್ವತ ವಾಸಸ್ಥಾನವಾಗಿರುವುದು. ಸದಾ ಅಪಮಾನಕರ ಶಿಕ್ಷೆಯನ್ನನುಭವಿಸುತ್ತಾ ಆ ದುಷ್ಕರ್ಮಿಗಳದರಲ್ಲಿ ಸದಾ ಬಿದ್ದಿರುವರು. ಆ ಬಳಿಕ ಅಲ್ಲಿಂದ ಹೊರಬರುವ ಯಾವ ಮಾರ್ಗವೂ ಅವರಿಗಲ್ಲಿ ದೊರಕದು.

*********

# ಮಾನವ ಮತ್ತು ಸ್ವರ್ಗ

ಬಹುಶಃ 1998ರ ಇಸವಿ ಇರಬೇಕು, ಡಾಕ್ಟರ್ ಮಹೇಶ್ ಚಂದ್ರ ಶರ್ಮಾ ನನ್ನನ್ನು ದೆಹಲಿಯ ಹಿರಿಯ ವಿದ್ವಾಂಸ ವ್ಯಕ್ತಿ ಪ್ರೊಫೆಸರ್ ನವ್ ನಿಹಾಲ್ ಸಿಂಗ್ ರನ್ನು (ಜನನ 1928) ಭೇಟಿ ಮಾಡಿಸಿದರು. ಅಮೆರಿಕಾದಲ್ಲಿ ಮಾಡುತ್ತಿದ್ದ ನೌಕರಿಯಿಂದ ನಿವೃತ್ತಿ ದೊರೆತ ಬಳಿಕ ಭಾರತಕ್ಕೆ ವಾಪಾಸ್ಸಾಗಿದ್ದ ಅವರನ್ನು ರಾಜ್ಯಸಭೆಯ ಸದಸ್ಯರನ್ನಾಗಿ (1992–1998) ಮಾಡಲಾಗಿತ್ತು. ಅವರ ಮನೆಯನ್ನು ನೋಡುವಾಗ ಅದೊಂದು ಗ್ರಂಥಾಲಯವೇನೋ ಎಂಬಂತೆ ಭಾಸವಾಗುತ್ತಿತ್ತು. ಅಲ್ಲಿ ಎಲ್ಲೆಲ್ಲೂ ಓದುವ, ಬರೆಯುವ ವಾತಾವರಣವಿತ್ತು. ನಿಹಾಲ್ ಸಿಂಗ್ ಎಲ್ಲ ಕೋನದಲ್ಲೂ ಓರ್ವ ಮಹಾವಿದ್ವಾಂಸರಾಗಿ ಪ್ರತಿಬಿಂಬಿಸುತ್ತಿದ್ದರು.

ನಮ್ಮ ಮಾತುಕತೆಯ ನಡುವೆ ಅವರು, ತಾನು ರಾಜಕೀಯ ಶಾಸ್ತ್ರದಲ್ಲಿ ಎಂ.ಎ ಮಾಡಿದ್ದಾಗಿ ತಿಳಿಸಿದರು. ಎಂ.ಎ ಪದವಿಯ ಬಳಿಕ ಅಂತರ್ ರಾಷ್ಟ್ರೀಯ ಸಂಬಂಧ (international relations) ಎಂಬ ವಿಷಯದ ಕುರಿತು ಅವರು ಡಾಕ್ಟರೇಟ್ ಮುಗಿಸಿದರು. ಆ ಸಮಯದಲ್ಲಿ ಅಮೆರಿಕ ಯುನಿವರ್ಸಿಟಿಯೊಂದರಲ್ಲಿ ಈ ವಿಷಯದ ಕುರಿತು ಪಾಠ ಮಾಡಬಲ್ಲ ಪ್ರೊಫೆಸರ್ ರೊಬ್ಬರ ತುರ್ತು ಆವಶ್ಯಕತೆ ಇತ್ತು. ಆ ಕುರಿತು ಜಾಹೀರಾತು ನೋಡಿದ ಸಿಂಗ್ ಸಾಹೇಬರು ಶೀಘ್ರವೇ ನೌಕರಿಗಾಗಿ ಅರ್ಜಿ ಸಲ್ಲಿಸಿದರು. ಅವರ ಅರ್ಜಿಯನ್ನು ಸ್ವೀಕರಿಸಿದ ಯುನಿವರ್ಸಿಟಿಯು ನೌಕರಿಯ ಸಂದರ್ಶನ ತೆಗೆದುಕೊಳ್ಳಲಿಕ್ಕಾಗಿ ಸಿಂಗ್ ರನ್ನು ಅಮೆರಿಕಕ್ಕೆ ಆಹ್ವಾನಿಸಿತು. ಅವರು ಅಮೆರಿಕಕ್ಕೆ ತಲುಪುತ್ತಿದ್ದಂತೆಯೇ ವಿಮಾನ ನಿಲ್ದಾಣದಲ್ಲಿ ಅವರನ್ನು ಬರಮಾಡಿಕೊಳ್ಳಲು ಯುನಿವರ್ಸಿಟಿಯ ವತಿಯಿಂದ ವ್ಯಕ್ತಿಯೋರ್ವರನ್ನು ಕಳುಹಿಸಲಾಗಿತ್ತು. ಆ ವ್ಯಕ್ತಿಯು ಸಿಂಗ್ ಸಾಹೇಬರ ಬಳಿ, 'ನನ್ನನ್ನು ಯುನಿವರ್ಸಿಟಿಯ ವತಿಯಿಂದ ನಿಮ್ಮ ಸಹಾಯಕ್ಕಾಗಿ ಕಳುಹಿಸಲಾಗಿದೆ' ಎನ್ನುತ್ತಾ ಕಾರಿನಲ್ಲಿ ಸಿಂಗ್ ಸಾಹೇಬರನ್ನು ಕೂರಿಸಿಕೊಂಡು ಯುನಿವರ್ಸಿಟಿಗೆ ಕರೆತಂದರು. ಸಿಂಗ್ ಸಾಹೇಬರಿಗೆ ತಂಗಲು ಯುನಿವರ್ಸಿಟಿಯ ಅತಿಥಿಗೃಹದಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಆ ಬಳಿಕ ಪ್ರೊಫೆಸರ್ ರ ಸಹಾಯಕ್ಕಾಗಿ ನೇಮಿಸಿದ್ದ ವ್ಯಕ್ತಿಯು ಪ್ರತಿದಿನ ಬೆಳಗ್ಗೆ ಅತಿಥಿಗೃಹಕ್ಕೆ ಬಂದು ಪ್ರೊಫೆಸರ್ ರನ್ನು ಕರೆದೊಯ್ಯುತ್ತಿದ್ದರು. ಬೆಳಗ್ಗೆಯಿಂದ ಸಂಜೆಯ ತನಕ

ಪ್ರೊಫೆಸರ್ ರನ್ನು ಯುನಿವರ್ಸಿಟಿಯ ವಿಶಾಲ ಕ್ಯಾಂಪಸ್ ನಲ್ಲಿ ಸುತ್ತಾಡಿಸುತ್ತಿದ್ದರು. ಈ ರೀತಿ ಆ ವ್ಯಕ್ತಿ ಪ್ರೊಫೆಸರ್ ರನ್ನು ಯುನಿವರ್ಸಿಟಿಯ ಪ್ರತಿಯೊಂದು ವಿಭಾಗಕ್ಕೂ ಕರೆದೊಯ್ದು ಅಲ್ಲಿನ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಿದರು. ಉದಾ: ಯುನಿವರ್ಸಿಟಿಯ ಲೈಬ್ರರಿ, ಅಲ್ಲಿನ ಡೈನಿಂಗ್ ಹಾಲ್, ಉಪನ್ಯಾಸಕರ ಕೋಣೆ, ತರಗತಿಯ ಕೊಠಡಿಗಳು, ವಿದ್ಯಾರ್ಥಿಗಳ ಸಭೆ ಹಾಗೂ ಯುನಿವರ್ಸಿಟಿಯ ನೌಕರರ ಪರಿಚಯ ಇತ್ಯಾದಿ.

ಈ ಚಟುವಟಿಕೆಗಳಲ್ಲೇ ಒಂದು ವಾರ ಕಳೆಯಿತು. ಪ್ರೊಫೆಸರ್ ಸಿಂಗ್ ರವರಿಗೆ ಕಳವಳ ಶುರುವಾಯಿತು. ಅವರು ತಮ್ಮ ವಿಭಾಗದ ಮುಖ್ಯಸ್ಥರಿರುವ ಕೊಠಡಿಗೆ ಧಾವಿಸಿ, 'ಸರ್, ನನ್ನನ್ನು ನೌಕರಿಯ ಸಂದರ್ಶನಕ್ಕಾಗಿ ಆಹ್ವಾನಿಸಲಾಗಿತ್ತು. ಆದರೆ ಬಂದು ಒಂದು ವಾರ ಕಳೆದರೂ ಇದುವರೆಗೆ ನನ್ನ ಸಂದರ್ಶವನ್ನು ಪಡೆದಿಲ್ಲ ತಾವು' ಎನ್ನುತ್ತಾ ತಮ್ಮ ಕಳವಳವನ್ನು ತೋಡಿಕೊಂಡರು. ವಿಭಾಗದ ಮುಖ್ಯಸ್ಥರು, 'ನಿಮ್ಮ ಸಂದರ್ಶನ ಈಗಾಗಲೇ ಮುಗಿದಾಗಿದೆ. ತಾವು ನಾಳೆಯಿಂದಲೇ ತಮ್ಮ ಸೇವೆಯನ್ನು ಆರಂಭಿಸಬಹುದು.' ಎನ್ನುತ್ತಾ ಪ್ರೊಫೆಸರ್ ಸಿಂಗ್ ರನ್ನು ಸಮಾಧಾನಿಸಿದರು. ಆ ಬಳಿಕ ಮುಖ್ಯಸ್ಥರು, ವಿಮಾನನಿಲ್ದಾಣದಲ್ಲಿ ತಮ್ಮನ್ನು ಬರಮಾಡಿಕೊಳ್ಳಲು ಯಾವ ವ್ಯಕ್ತಿಯನ್ನು ನೇಮಿಸಲಾಗಿತ್ತೋ ಅವರು ಈ ವಿಭಾಗದ ಅನುಭವಸ್ಥ ಪ್ರೊಫೆಸರ್ ಆಗಿರುವರು. ನಿಮ್ಮ ಸಂದರ್ಶನವನ್ನು ತೆಗೆದುಕೊಳ್ಳುವ ಹೊಣೆಯನ್ನೂ ಅವರಿಗೇ ನೀಡಲಾಗಿತ್ತು ಎಂದು ಹೇಳಿದರು.

ಮುಖ್ಯಸ್ಥರು ಮುಂದುವರಿಯುತ್ತಾ, ನೌಕರಿಗೆ ಸಂಬಂಧಪಟ್ಟ ನಿಮ್ಮ ವಿದ್ಯಾರ್ಹತೆ ಮತ್ತು ಪ್ರಮಾಣಪತ್ರಗಳನ್ನು ನೋಡಿದ ಬಳಿಕ ತಾವು ಶೈಕ್ಷಣಿಕವಾಗಿ ನಮ್ಮಲ್ಲಿ ಖಾಲಿಯಿರುವ ಹುದ್ದೆಗೆ ಅರ್ಹರಾಗಿದ್ದೀರಿ ಎಂದು ನಾವು ಮೊದಲೇ ಮನಗಂಡಿದ್ದೆವು. ಆದರೆ, ತಾವು ನಮ್ಮ ಯುನಿವರ್ಸಿಟಿಯ ಮಾನದಂಡಗಳಿಗೆ ಹೊಂದಿಕೊಳ್ಳುತ್ತೀರೋ ಇಲ್ಲವೋ ಎಂಬುದನ್ನೂ ನಾವು ತಿಳಿಯಬೇಕಿತ್ತು. ತಮ್ಮನ್ನು ಬರಮಾಡಿಕೊಂಡ ಪ್ರೊಫೆಸರ್ ರನ್ನು ಈ ಕಾರ್ಯಕ್ಕಾಗಿಯೇ ನೇಮಿಸಲಾಗಿತ್ತು. ತಮ್ಮನ್ನು ಯುನಿವರ್ಸಿಟಿಯ ವಿವಿಧ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡಿದ್ದೂ ಅದೇ ಕಾರಣಕ್ಕಾಗಿತ್ತು. ತಾವು ಈ ನಡುವೆ ವಿದ್ಯಾರ್ಥಿ ಮತ್ತು ಇತರ ಉಪನ್ಯಾಸಕರೊಂದಿಗೆ ಹೇಗೆ ವರ್ತಿಸುತ್ತೀರಿ ಎಂಬುದರ ಕುರಿತು ನಿಮ್ಮ ನಡೆ–ನುಡಿಯನ್ನು ಬಹಳ ಸೂಕ್ಷ್ಮವಾಗಿ ಗಮನಿಸಲಾಯಿತು. ನಿಮ್ಮ ಸಂದರ್ಶನಕ್ಕಾಗಿ ನೇಮಿಸಿದ್ದ ಪ್ರೊಫೆಸರ್ ನಿಮ್ಮ ಕುರಿತು

ಎಲ್ಲ ಕೋನಗಳಲ್ಲೂ ಸೂಕ್ಷ್ಮವಾಗಿ ಪರಿಶೀಲಿಸಿದ ಬಳಿಕ, ನಿಮ್ಮ ಕುರಿತು ಬಹಳ ಧನಾತ್ಮಕ ವರದಿಯನ್ನು ಸಲ್ಲಿಸಿದರು. ಆ ವರದಿ ಬಂದ ಕೂಡಲೇ ತಮ್ಮನ್ನು ನಾವು ಪ್ರೊಫೆಸರ್ ಹುದ್ದೆಗೆ ಆಯ್ಕೆ ಮಾಡಿಕೊಂಡಿದ್ದೇವೆ. ತಾವು ನಾಳೆಯಿಂದಲೇ ತಮ್ಮ ಉಪನ್ಯಾಸದ ಸೇವೆಯನ್ನು ಆರಂಭಿಸಬಹುದು ಎಂದು ಹೇಳಿದರು.

ಈ ಘಟನೆಯು ಸ್ವರ್ಗ ಮತ್ತು ಮಾನವನ ಕುರಿತು ಬೆಳಕು ಚೆಲ್ಲುವಲ್ಲಿ ಒಂದು ಉತ್ತಮ ಉದಾಹರಣೆ ಎನ್ನಬಹುದು. ದೇವನು ಬಹಳ ವಿಶಾಲ ಹಾಗೂ ಪರಿಪೂರ್ಣವಾದ ಜಗತ್ತೊಂದನ್ನು ನಿರ್ಮಿಸಿದನು. ದೇವನು ನಿರ್ಮಿಸಿದ ವಿಶಿಷ್ಟವೂ ಪರಿಪೂರ್ಣವೂ ಆದ ಆ ಜಗತ್ತಿನ ಹೆಸರೇ ಸ್ವರ್ಗ. ಅಲ್ಲಿರುವ ಪ್ರತಿಯೊಂದು ವಸ್ತುವೂ ಬಹಳ ಅದ್ಭುತವೂ ಅತ್ಯುತ್ತಮ ಗುಣಮಟ್ಟದ್ದೂ ಆಗಿತ್ತು. ತಾನು ನಿರ್ಮಿಸಿದ ಈ ಅದ್ಭುತ ಜಗತ್ತಿನಲ್ಲಿ ವಾಸಿಗಳು ಕೂಡ ಅದ್ಭುತ ಗುಣಮಟ್ಟದ ವ್ಯಕ್ತಿತ್ವವುಳ್ಳ ಜನರೇ ಆಗಿರಬೇಕು ಎಂದು ದೇವನು ತೀರ್ಮಾನಿಸಿದನು.

ಸ್ವರ್ಗವನ್ನು ಪರಿಚಯಿಸಲಿಕ್ಕಾಗಿ ದೇವನು ನಾವೀಗ ವಾಸಿಸುತ್ತಿರುವ ಭೂಗ್ರಹವನ್ನು ಸೃಷ್ಟಿಸಿದನು. ಸ್ವರ್ಗದಲ್ಲಿ ದೊರೆಯುವ ರೀತಿಯ ಎಲ್ಲ ವಸ್ತುಗಳೂ ಇಲ್ಲಿಯೂ ಕಾಣಸಿಗುತ್ತವೆ. ಇವುಗಳ ನಡುವಿನ ದೊಡ್ಡ ವ್ಯತ್ಯಾಸವೇನೆಂದರೆ, ಸ್ವರ್ಗದಲ್ಲಿ ವಸ್ತುಗಳು ಪರಿಪೂರ್ಣವೂ (Perfect), ಅಸಾಮಾನ್ಯ ಗುಣಮಟ್ಟದ್ದೂ ಆಗಿದ್ದರೆ, ಇಲ್ಲಿ ದೊರೆಯುವ ವಸ್ತುಗಳು ಅಪರಿಪೂರ್ಣವೂ (Imperfect) ಸಾಮಾನ್ಯ ಗುಣಮಟ್ಟದ್ದೂ ಆಗಿವೆ. ಸ್ವರ್ಗಲೋಕದ ಜೀವನ ಶಾಶ್ವತವಾದರೆ ಇಲ್ಲಿನ ಭೌತಿಕ ಜೀವನ ನಶ್ವರವಾಗಿದೆ. ಸ್ವರ್ಗಲೋಕದ ಜೀವನ ಎಲ್ಲ ರೀತಿಯ ಭಯ, ಅಶಾಂತಿ, ದುಃಖ–ದುಮ್ಮಾನಗಳಿಂದ ಮುಕ್ತವಾಗಿದ್ದರೆ ಇಲ್ಲಿನ ಲೌಕಿಕ ಜೀವನ ದುಃಖ–ದುಮ್ಮಾನ ಭಯಾಶಂಕೆಗಳಿಂದ ಕೂಡಿದ ಅಶಾಂತಿಯ ಜೀವನವಾಗಿದೆ. ಸ್ವರ್ಗದ ಜೀವನವು ಸತ್ಕಾರದ (Reward) ರೂಪದಲ್ಲಿ ದೊರೆಯುವ ಪ್ರತಿಫಲವಾದರೆ ಲೌಕಿಕ ಜೀವನವು ಒಂದು (Test) ಪರೀಕ್ಷಾಗೃಹವಾಗಿದೆ.

ಈ ಯೋಜನೆಯನ್ವಯ ದೇವನು ಮಾನವನನ್ನು ಸೃಷ್ಟಿಸಿ ಭೂಮಿಯಲ್ಲಿ ನೆಲೆಗೊಳಿಸಿದನು. ಇಲ್ಲಿ ಅವನಿಗೆ ಸಂಪೂರ್ಣ ಕ್ರಿಯಾ ಸ್ವಾತಂತ್ರ್ಯವನ್ನು ಕೊಟ್ಟು, ಯಾವುದೇ ನಿರ್ಬಂಧವಿಲ್ಲದೆ ಜೀವಿಸುವ ಅವಕಾಶವನ್ನು ಅವನಿಲ್ಲಿ ಮಾನವನಿಗೆ ನೀಡಿದನು. ಮಾನವನಿಗೆ ನೀಡಲಾಗಿರುವ ಕ್ರಿಯಾ ಸ್ವಾತಂತ್ರ್ಯವನ್ನು ಒಳಿತಿನ ಮಾರ್ಗದಲ್ಲಿ ಉಪಯೋಗಿಸುವನೋ ಅಥವಾ

ಕೆಡುಕಿನ ಮಾರ್ಗದಲ್ಲಿ ದುರುಪಯೋಗಪಡಿಸಿಕೊಳ್ಳುವನೋ ಅದು ಅವನಿಗೆ ಬಿಟ್ಟಿದ್ದು. ಈ ಭೂಮಿಯಲ್ಲಿ ಹುಟ್ಟುವ ಪ್ರತಿಯೋರ್ವ ಮನುಷ್ಯನೊಂದಿಗೆ ಇಬ್ಬರು ಅದೃಶ್ಯ (invisible) ದೇವಚರರನ್ನು ನಿಯೋಜಿಸಲಾಗುತ್ತದೆ. ಪ್ರತಿಯೋರ್ವ ಮನುಷ್ಯನೊಂದಿಗೆ ತಲಾ ಈರ್ವ ನಿಯೋಜಿತ ದೇವಚರರು ಸದಾ ಜೊತೆಗಿದ್ದು, ಮನುಷ್ಯನ ಪ್ರತಿಯೊಂದು ನಡೆ–ನುಡಿ, ಅವನು ಮಾಡುವ ಸತ್ಕಾರ್ಯ, ದುಷ್ಕರ್ಮ ಎಲ್ಲವನ್ನೂ ಚಾಚೂ ತಪ್ಪದೆ ದಾಖಲಿಸಿಕೊಳ್ಳುತ್ತಿರುತ್ತಾರೆ. ಇದೇ ದಾಖಲಿತ ವರದಿಯಾಧಾರದಲ್ಲಿ ಪರಲೋಕದಲ್ಲಿ ಆಯಾ ವ್ಯಕ್ತಿಯು ಉನ್ನತ ಸ್ವರ್ಗಕ್ಕೆ ಅರ್ಹನೋ ಅಥವಾ ನರಕವಾಸಿಯಾಗಲಿರುವನೋ ಎಂದು ತೀರ್ಮಾನಿಸಲಾಗುವುದು.

ಸ್ವರ್ಗಲೋಕದಲ್ಲೂ ಮಾನವನಿಗೆ ಸಂಪೂರ್ಣ ಸ್ವಾತಂತ್ರ್ಯವಿರುವುದು. ಆದರೆ, ಅವನಲ್ಲಿ ಎಷ್ಟು ಪ್ರಬುದ್ಧತೆ ಮತ್ತು ಸಜ್ಜನಿಕೆಯುಳ್ಳ ವ್ಯಕ್ತಿಯಾಗಿರುವನೆಂದರೆ ತನಗೆ ನೀಡಲಾದ ಸ್ವಾತಂತ್ರ್ಯವನ್ನಾತ ಯಾವ ಕಾರಣಕ್ಕೂ ಕಿಂಚಿತ್ತೂ ದುರುಪಯೋಗಪಡಿಸಿಕೊಳ್ಳಲಾರನು. ಅವನಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದರೂ, ಎಲ್ಲ ರೀತಿಯಲ್ಲೂ ಶಿಸ್ತುಬದ್ಧ ಜೀವನ ಶೈಲಿಯನ್ನು ತನ್ನದಾಗಿಸಿಕೊಂಡಿರುವನು. ಸ್ವರ್ಗಕ್ಕೆ ಅರ್ಹರಾಗಬಲ್ಲ ಅಂತಹ ಸಜ್ಜನ ವ್ಯಕ್ತಿಗಳ ಆಯ್ಕೆಯ ಉದ್ದೇಶಕ್ಕಾಗಿಯೇ ಭೂಮಿಯನ್ನು ಸೃಷ್ಟಿಸಿ, ಮಾನವರನ್ನಿಲ್ಲಿ ನೆಲೆಗೊಳಿಸಲಾಗಿದೆ. ಸ್ವರ್ಗದಲ್ಲಿ ಎದುರಾಗಲಿರುವ ಎಲ್ಲ ಸನ್ನಿವೇಶಗಳು ಪ್ರಸ್ತುತ ಜಗತ್ತಿನಲ್ಲಿಯೂ ಕಾಣಸಿಗುತ್ತದೆ. ಎಲ್ಲಾ ರೀತಿಯ ಸನ್ನಿವೇಶಗಳ ಮೂಲಕ ಹಾದುಹೋಗಿಯೂ ತನ್ನ ಸನ್ನಡತೆಯನ್ನು ಕಾಪಾಡಿಕೊಳ್ಳುವ, ತನ್ನನ್ನು ತಾನು ಸ್ವರ್ಗಕ್ಕೆ ಅರ್ಹನಾದ ಉನ್ನತ ಚಾರಿತ್ರ್ಯವುಳ್ಳ ವ್ಯಕ್ತಿ ಎಂದು ಸಾಬೀತುಪಡಿಸಬಲ್ಲವರು ಯಾರು ಎಂಬುದನ್ನು ಇಲ್ಲಿ ನೋಡಲಾಗುತ್ತಿದೆ. ಅಂತಹ ಉತ್ತಮ ನಡೆ–ನುಡಿ, ಉನ್ನತ ಚಾರಿತ್ರ್ಯವುಳ್ಳ ವ್ಯಕ್ತಿಗಳನ್ನು ಮಾತ್ರವೇ ಶಾಶ್ವತ ಸ್ವರ್ಗದ ನಿವಾಸಿಗಳನ್ನಾಗಿ ಆಯ್ಕೆ ಮಾಡಲಾಗುವುದು.

ಈ ಮೊದಲೇ ಹೇಳಿದಂತೆ ಪ್ರತಿಯೋರ್ವ ವ್ಯಕ್ತಿಯೊಂದಿಗೂ ದೇವನು ನಿಯೋಜಿಸಿದ ಈರ್ವ ಅದೃಶ್ಯ ದೇವಚರರಿದ್ದು, ವ್ಯಕ್ತಿಯ ಪ್ರತಿಯೊಂದು ಕರ್ಮವನ್ನೂ, ಅವನ ಆಯಸ್ಸಿನ ಪ್ರತಿಯೊಂದು ಕ್ಷಣವನ್ನೂ ದಾಖಲಿಸಿಕೊಳ್ಳುತ್ತಿರುವರು. ಇದೇ ಮಾನವನ ಪಾಲಿನ ಪರೀಕ್ಷೆಯಾಗಿದ್ದು, ಈ ಪರೀಕ್ಷೆಯ ಫಲಿತಾಂಶದನುಸಾರ ವ್ಯಕ್ತಿಯ ಭವಿಷ್ಯವನ್ನು ನಿರ್ಧರಿಸಲಾಗುವುದು. ಈ ಪರೀಕ್ಷೆಯ ಫಲಿತಾಂಶ ಉತ್ತಮವಾಗಿರಬೇಕಾದರೆ, ಮಾನವನು ಪ್ರತಿಯೊಂದು ವಿಷಯದಲ್ಲೂ ದೇವನ ಮಹಾನತೆಯನ್ನು ಮನಸಾರೆ ಒಪ್ಪಿಕೊಳ್ಳಬೇಕು.

ಆ ಪರೀಕ್ಷೆ ಏನೆಂದರೆ, ವ್ಯಕ್ತಿಯೋರ್ವ ದೇವನ ಮಹಾನತೆಯನ್ನು ಹೃದಯಾಂತರಾಳದಿಂದ ಸ್ವೀಕರಿಸಿದನೋ ಅಥವಾ ಅದನ್ನು ಕಡೆಗಣಿಸಿದನೋ?. ಆತನ ಮುಂದೆ ಸತ್ಯದ ಕುರಿತ ಸಾಕ್ಷ್ಯವು ಬಂದಲ್ಲಿ, ಅವನು ಆ ಸತ್ಯದೆದುರು ಮಂಡಿಯೂರಿದನೋ ಅಥವಾ ಆ ಸತ್ಯವನ್ನು ವಿರೋಧಿಸುತ್ತಾ ದುರಹಂಕಾರ ತೋರಿದನೋ?. ಸತ್ಯ ಮತ್ತು ಅಹಂಕಾರಗಳ ಪರಸ್ಪರ ಘರ್ಷಣೆಯಾಗುವಾಗ ವ್ಯಕ್ತಿಯು ತನ್ನ ಮನಸ್ಸಿನೊಳಗೆ ಮನೆ ಮಾಡಿರುವ ಅಹಂಕಾರವನ್ನು ಕಾಲಲ್ಲಿ ತುಳಿದು ಸತ್ಯವನ್ನು ತನ್ನದಾಗಿಸಿಕೊಂಡನೋ ಅಥವಾ ಅಹಂಕಾರದ ನಶೆಯಲ್ಲಿ ಸತ್ಯವನ್ನೇ ಕಡೆಗಣಿಸಿದನೋ? ಇದೇ ರೀತಿ ಜನರೊಂದಿಗೆ ವ್ಯವಹರಿಸುವಾಗ ಆತ ದೇವಭಯದೊಂದಿಗೆ ನ್ಯಾಯವನ್ನು ಪಾಲಿಸಿದನೋ ಅಥವಾ ತನ್ನ ಸ್ವೇಚ್ಛೆಗಂಟಿಕೊಂಡು ಅನ್ಯಾಯವೆಸಗಿದನೋ?. ಅವನು ಕೇವಲ ಸಾರ್ವಜನಿಕ ಜೀವನದಲ್ಲಿ ಉತ್ತಮ ವ್ಯಕ್ತಿಯಂತೆ ನಟಿಸುತ್ತಿರುವನೋ ಅಥವಾ ತನ್ನ ಖಾಸಗೀ ಜೀವನದಲ್ಲೂ ಉತ್ತಮ ವ್ಯಕ್ತಿಯಾಗಿರುವನೋ?, ನಿಜವಾಗಿಯೂ ಅವನು ಸತ್ಯ–ನ್ಯಾಯದ ಕುರಿತು ಕಾಳಜಿ ಹೊಂದಿರುವ ವ್ಯಕ್ತಿಯೋ ಅಥವಾ ಕೇವಲ ಸ್ವಹಿತಾಸಕ್ತಿಯ ಪೂಜಾರಿಯೋ? ಆತನಿಗೆ ಅಧಿಕಾರ ದೊರಕಿದಾಗ ಭ್ರಷ್ಟಚಾರಿಯಾದನೋ ಅಥವಾ ಪ್ರಾಮಾಣಿಕನಾಗಿದ್ದುಕೊಂಡು ತನ್ನ ಹುದ್ದೆಗೆ ನ್ಯಾಯ ಒದಗಿಸಿದನೋ?, ಶ್ರೀಮಂತಿಕೆ–ಬಡತನ ಎರಡೂ ಸ್ಥಿತಿಯಲ್ಲಿ ಆತ ಒಂದೇ ತೆರನಾದ ಸಮನ್ವಯತೆ ಕಾಪಾಡಿಕೊಂಡನೋ ಅಥವಾ ಅನ್ಯಾಯದ ಮಾರ್ಗದಲ್ಲಿ ಮುಂದುವರಿದನೋ?, ತನ್ನ ಸಾರ್ವಜನಿಕ ಜೀವನದಲ್ಲಿ ಆತನಿಗೆ ನಾಯಕತ್ವ ದೊರಕಿದಾಗ ಆತನ ವರ್ತನೆ ಹೇಗಿತ್ತು ಮತ್ತು ಸಾಮಾನ್ಯ ಕಾರ್ಯಕರ್ತನಾಗಿದ್ದಾಗ ಆತನ ವರ್ತನೆ ಹೇಗಿತ್ತು?, ಅವನು ತನ್ನ ಆಸೆ–ಆಕಾಂಕ್ಷೆಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ಶಿಸ್ತುಬದ್ಧ ಜೀವನವನ್ನು ನಡೆಸುತ್ತಿದ್ದನೋ ಅಥವಾ ಚಿತ್ತಾಕಾಂಕ್ಷೆಯನ್ನು ಅನುಸರಿಸುವ ತನ್ನ ಚಿತ್ತಾಕಾಂಕ್ಷೆಯ ದಾಸನಾಗಿದ್ದನೋ?, ಇವೆಲ್ಲವನ್ನು ದೇವನಿಯೋಜಿತ ದೇವಚರರು ದಾಖಲಿಸಿಕೊಳ್ಳುತ್ತಿರುವರು. ಇದೇ ಆಧಾರದಲ್ಲಿ ವ್ಯಕ್ತಿಯೋರ್ವ ಭವಿಷ್ಯ ಅರ್ಥಾತ್ ಆತ ಸ್ವರ್ಗವಾಸಿಯಾಗಲು ಅರ್ಹನೋ ಅಥವಾ ಆತ ಕೇವಲ ನರಕವಾಸಿಯಾಗಲಷ್ಟೇ ಯೋಗ್ಯನೋ ಎಂಬುದರ ನಿರ್ಧಾರವಾಗುತ್ತದೆ.

ನಾವು ವಾಸಿಸುತ್ತಿರುವ ಪ್ರಸ್ತುತ ಜಗತ್ತು ನಶ್ವರ ಜಗತ್ತಾಗಿದೆ. ಪರೀಕ್ಷಾರ್ಥವಾಗಿ ಇದನ್ನು ಸೀಮಿತ ಅವಧಿಗಾಗಿ ಸೃಷ್ಟಿಸಲಾಗಿದೆಯಷ್ಟೇ. ಈ ಸೀಮಿತ ಅವಧಿ ಮುಕ್ತಾಯವಾದೊಡನೆಯೇ ಇಲ್ಲಿ ಹುಟ್ಟಿರುವ ಪ್ರತಿಯೋರ್ವ ಸ್ತ್ರೀ–ಪುರುಷರೂ ದೇವನ ಮುಂದೆ ಹಾಜರುಗೊಳಿಸಲ್ಪಡುವರು.

ದೇವನು ತನ್ನ ನಿಯೋಜಿತ ದೇವಚರರ ವರದಿಯಾಧಾರದ ಮೇಲೆ ಪ್ರತಿಯೋರ್ವರ ಭವಿಷ್ಯವನ್ನು ನಿರ್ಧರಿಸುವನು. ಇನ್ನು ಯಾರು, ತನ್ನ ಲೌಕಿಕ ಜೀವನದಲ್ಲಿ ಉನ್ನತ ಚಾರಿತ್ರ್ಯದೊಂದಿಗೆ ಸಜ್ಜನ, ಸತ್ಕರ್ಮಿಯಾಗಿ ಬದುಕಿ ತೋರಿಸಿದನೋ ಅವನು ತನಗೆ ಪರೀಕ್ಷಾರ್ಥವಾಗಿ ನೀಡಲಾಗಿದ್ದ ಸ್ವಾತಂತ್ರ್ಯವನ್ನು ಸದುಪಯೋಗಪಡಿಸಿಕೊಂಡು ತನ್ನನ್ನು ತಾನು ಸ್ವರ್ಗಕ್ಕೆ ಯೋಗ್ಯನೆಂದು ನಿರೂಪಿಸಿಕೊಂಡನು. ಅಂತಹ ಸತ್ಕರ್ಮಿಗಳನ್ನು ಸ್ವರ್ಗೋದ್ಯಾನಗಳ ವಾರೀಸುದಾರರನ್ನಾಗಿ ಆಯ್ಕೆ ಮಾಡಲಾಗುವುದು. ಇನ್ನು ಯಾರು, ತಮಗೆ ಪರೀಕ್ಷಾರ್ಥವಾಗಿ ನೀಡಲಾಗಿದ್ದ ಸ್ವಾತಂತ್ರ್ಯವನ್ನು ದುರಪಯೋಗಪಡಿಸಿಕೊಂಡು, ಸ್ವೇಚ್ಛಾಚಾರಿಗಳಾಗಿ ಬದುಕಿ, ದುಷ್ಕರ್ಮಗಳಲ್ಲಿ ತಲ್ಲೀನರಾದ ಸ್ಥಿತಿಯಲ್ಲಿ ಲೌಕಿಕ ಜೀವನಕ್ಕೆ ವಿದಾಯ ಹೇಳಿದ್ದರೋ ಅವರೆಲ್ಲರನ್ನೂ ಕೆಲಸಕ್ಕೆ ಬಾರದ ದುಷ್ಕರ್ಮಿಗಳೆಂದು ಪರಿಗಣಿಸಿ, ಅಂತವಹರಿಗಾಗಿಯೇ ತಯಾರಿಸಲಾದ ನರಕವೆಂಬ ಬ್ರಹ್ಮಾಂಡದ ಶಾಶ್ವತ ಕಸದತೊಟ್ಟಿಗೆ ಅವರನ್ನು ಎಸೆಯಲಾಗುವುದು. ಅಲ್ಲಿಯವರು ಸದಾ ಹತಾಶೆ ಮತ್ತು ವಿಷಾದದಲ್ಲೇ ಬದುಕುವರು. ನರಕದಿಂದ ಬಿಡುಗಡೆ ಹೊಂದುವ ಯಾವುದೇ ಮಾರ್ಗವೂ, ಯಾವುದೇ ಅವಕಾಶವೂ ಅವರಿಗೆ ದೊರೆಯದು.

*********

❖ ಸೆಂಟರ್ ಫಾರ್ ಪೀಸ್ ಅಂಡ್ ಸ್ಪಿರಿಚುವಾಲಿಟಿ ಇಂಟರ್ ನ್ಯಾಶನಲ್, (CPS ಇಂಟರ್ ನ್ಯಾಶನಲ್) ಯಾವುದೇ ರಾಜಕೀಯ ಮತ್ತು ಲಾಭೋದ್ದೇಶವಿಲ್ಲದ ಸರ್ಕಾರೇತರ ಸಂಸ್ಥೆಯಾಗಿದೆ (NGO). ನಮ್ಮ ಸಂಸ್ಥೆಯ ಕೇಂದ್ರ ಕಾರ್ಯಾಲಯವು ದೆಹಲಿಯಲ್ಲಿದ್ದು, ನಮ್ಮದು ಅದರ ಬೆಂಗಳೂರು ಶಾಖೆಯಾಗಿದೆ. ಈ ಸಂಸ್ಥೆಯು ಆಧ್ಯಾತ್ಮಿಕತೆಯ ಸಂದೇಶಗಳನ್ನು ಸಾರುವ ಮೂಲಕ ಶಾಂತಿಯ ಮೌಲ್ಯಗಳನ್ನು ಪ್ರೋತ್ಸಾಹಿಸುವ ಮತ್ತು ಅದನ್ನು ಬಲಪಡಿಸುವ ಬೃಹತ್ ಗುರಿಯನ್ನು ಹೊಂದಿದೆ. ಈ ಸಂಸ್ಥೆಯು ಶಾಂತಿ ಮತ್ತು ಸದ್ವಿಚಾರಗಳನ್ನು ಸಾರುವ ಮೂಲಕ ದೇಶಾದ್ಯಂತ ಉತ್ತಮ ಸಮಾಜವನ್ನು ನಿರ್ಮಿಸಲು ನಿರಂತರವಾಗಿ ಶ್ರಮಿಸುತ್ತಿದೆ.

❖ ಈ ಸಂಸ್ಥೆಯನ್ನು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಮೌಲಾನಾ ವಹೀದುದ್ದೀನ್ ಖಾನ್ ರವರು 2001ರಲ್ಲಿ ಸಂಸ್ಥಾಪಿಸಿದರು. ಮೌಲಾನಾ ವಹೀದುದ್ದೀನ್ ಖಾನ್ ಇವರು ಅಗಾಧ ಜ್ಞಾನವುಳ್ಳ ಇಸ್ಲಾಮೀ ವಿದ್ವಾಂಸರಾಗಿದ್ದರು. ಮೌಲಾನರು ಶಾಂತಿಯುತ ಸಮಾಜದ ಸಂಸ್ಥಾಪನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಈ ನಿಟ್ಟನಿಲ್ಲಿ ಅವರು ಪಟ್ಟ ಪರಿಶ್ರಮವನ್ನು ಭಾರತ ಸರಕಾರ ಸೇರಿದಂತೆ ಅನೇಕ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಂಸ್ಥೆಗಳು ಗುರುತಿಸಿ ಮೌಲಾನರಿಗೆ ಪ್ರಶಸ್ತಿ ನೀಡಿ ಅವರನ್ನು ಸನ್ಮಾನಿಸಿ ಗೌರವಿಸಿವೆ.

❖ ಭಾರತದ ಎರಡನೆ ಅತಿದೊಡ್ಡ ನಾಗರಿಕ ಪ್ರಶಸ್ತಿಯಾದ ಪದ್ಮವಿಭೂಷಣ ರಾಷ್ಟ್ರೀಯ ಪ್ರಶಸ್ತಿ ಸೇರಿದಂತೆ ಡಿಮಿಯುರ್ಗಸ್ ಅಂತರ್ ರಾಷ್ಟ್ರೀಯ ಶಾಂತಿ ಪ್ರಶಸ್ತಿ, ಶಾಂತಿಸ್ಥಾಪನೆಗಾಗಿ ಅವಿರತ ಪರಿಶ್ರಮವನ್ನು ಗುರುತಿಸಿ ಮುಸ್ಲಿಂ ಸಮುದಾಯದಲ್ಲಿ ನೀಡಲಾಗುವ ಸಯ್ಯಿದಿನಾ ಇಮಾಮ್ ಹಸನ್ ಇಬ್ನೆ ಅಲಿ ಪ್ರಶಸ್ತಿಗಳು ಮೌಲಾನಾರ ಮುಡಿಗೇರಿವೆ. ಮೌಲಾನಾರು ಇಸ್ಲಾಂನ ಆಧ್ಯಾತ್ಮಿಕ ರಾಯಭಾರಿ ಎಂದೇ ವಿಶ್ವದಾದ್ಯಂತ ಗುರುತಿಸಲ್ಪಟ್ಟಿದ್ದಾರೆ.

ಮೌಲಾನಾರ ಕೃತಿಗಳು ವಿಶ್ವದಾದ್ಯಂತ 16 ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿದೆ. ಮೌಲಾನರ ಪುಸ್ತಕಗಳು ಆರು ದೇಶಗಳ ವಿಶ್ವವಿದ್ಯಾನಿಲಯಗಳಲ್ಲಿ ಪಠ್ಯಗಳ ಭಾಗವಾಗಿವೆ.

❖ ಮೌಲಾನರ ಆಧ್ಯಾತ್ಮಿಕ ಲೇಖನಗಳು ಟೈಮ್ಸ್ ಆಫ್ ಇಂಡಿಯಾದ "ಸ್ಪೀಕಿಂಗ್ ಟ್ರೀ" (Speaking Tree) ಯ ವಿಭಾಗದಲ್ಲಿ ಸತತವಾಗಿ ಪ್ರಕಟವಾಗುತ್ತಿತ್ತು. ಈಗ ಅವರ ಸುಪುತ್ರಿಯಾದ ಪ್ರೊ. ಫರೀದಾ ಖಾನಮ್ ಇವರುಈ ವಿಭಾಗದಲ್ಲಿ ಮೌಲಾನಾರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವರು.

❖ ಸಕಲ ಮಾನವರ ಒಳಿತಿಗಾಗಿ ಸಮಾಜದಲ್ಲಿ ಶಾಂತಿ ನೆಲೆಸಬೇಕು. ಜಾತಿ, ಧರ್ಮ ಮತಗಳ ಬೇಧವಿಲ್ಲದೆ ಪ್ರತಿಯೋರ್ವರೂ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದಯುತ ವಾತಾವರಣವನ್ನು ನಿರ್ಮಿಸಲು ತಮ್ಮ ಕೊಡುಗೆಗಳನ್ನು ನೀಡಿದಾಗ ಮಾತ್ರ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ. ಈ ನಿಟ್ಟಿನಲ್ಲಿ ಕೋಮು ಸಂಘರ್ಷ ಅಳಿಸಿ, ಸಮಾಜದಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ನಮ್ಮ ಸಂಸ್ಥೆಯು ಹಗುಲಿರುಳೂ ಕಾರ್ಯನಿರ್ವಹಿಸುತ್ತಿದೆ.

ಭೂಮಿ ಮೇಲೆ ಹುಟ್ಟಿದ್ದೇ ಮೋಜು ಮಾಡಲು ಎಂದು ಭ್ರಮಿಸಿಕೊಂಡು ಜೀವಿಸುವಾತನ ಜೀವನ ಶೈಲಿಗೂ, ಈ ಲೌಕಿಕ ಜೀವನ ತನ್ನ ಪಾಲಿನ ಪರೀಕ್ಷಾ ಗೃಹವೆಂದುಕೊಂಡು ಜೀವಿಸುವವನ ಜೀವನಶೈಲಿಗೂ ಅಜಗಜಾಂತರ ವ್ಯತ್ಯಾಸವಿದೆ. ಮೊದಲನೆ ವ್ಯಕ್ತಿ ಜೀವನದುದ್ದೇಶವನ್ನು ಅರಿಯಲು ವಿಫಲನಾಗಿ ತನಗೆ ದೊರೆತ ಅಮೂಲ್ಯ ಅಯಸ್ಸನ್ನು ವ್ಯರ್ಥಗೊಳಿಸಿದ. ಎರಡನೆಯ ವ್ಯಕ್ತಿ ಜೀವನದ ಸದುದ್ದೇಶವನ್ನು ಅರಿತು ಜೀವಿಸಿ. ತನಗೆ ದೊರೆತ ಅವಕಾಶವನ್ನು ಪಾರಲೌಕಿಕ ವಿಜಯದ ಹೇತುವಾಗಿಸಿಕೊಂಡ.

goodwordbooks.com cpsglobal.org

Goodword Books CPS International

CPS Karnataka
shamuhallur2@gmail.com